# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಮಂಗಳವಾರ, ಜುಲೈ 12, 2022

ಸಂಪುಟ : 49 ಸಂಚಿಕೆ : 59 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




# ಕಾಳಿಕಾದೇವಿಗೆ ಅಪಚಾರ: ಖಂಡನೆ

## ವಿಶ್ವಕರ್ಮ ಸಮಾಜದ ಮಠಾಧೀಶರಿಂದ ಪಾದಯಾತ್ರೆ- ಪ್ರತಿಭಟನೆ

ದಾವಣಗೆರೆ, ಜು.11- ಆದಿಶಕ್ತಿ ಕಾಳಿಕಾದೇವಿಗೆ ಅಪಚಾರ ಮಾಡಿರುವುದನ್ನು ಖಂಡಿಸಿ ವಿಶ್ವಕರ್ಮ ಸಮಾಜದ ಮಠಾಧೀಶರು ನಗರದಲ್ಲಿಂದು ಆಕ್ರೋಶ ವ್ಯಕ್ತಪಡಿಸಿದರು.

ವಿಶ್ವ ಕರ್ಮ ಸಮಾಜದ ಸಮಾವೇಶದ ಪ್ರಯುಕ್ತ ಸುಮಾರು 40ಕ್ಕೂ ಹೆಚ್ಚು ಸ್ವಾಮೀಜಿಗಳು ಜಯದೇವ ವೃತ್ತದಿಂದ ಪಾದಯಾತ್ರೆ ಮೂಲಕ ಅಸಮಾಧಾನ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಹಾಸನ ಜಿಲ್ಲೆ ಅರೆಮಾದನಹಳ್ಳಿ ಶ್ರೀ ವಿಭೂಷಿತ ಶಿವಸುಜ್ಞಾನ ತೀರ್ಥ ಸ್ವಾಮೀಜಿ, ವಿಶ್ವಕರ್ಮ ಸಮಾಜದ ಆರಾಧ್ಯ ದೈವ ಕಾಳಿಕಾದೇವಿಗೆ ಅಪಚಾರ ಮಾಡಲಾಗಿದೆ. ಈ ಕೃತ್ಯದಿಂದ ಜಗತ್ತಿನಾದ್ಯಂತ ಕಾಳಿಕಾದೇವಿ ಆರಾಧಕರಿಗೆ ನೋವಾಗಿದೆ ಎಂದು ಆಕ್ಷೇಪಿಸಿದರು.

ವಿಶ್ವಕರ್ಮ ಮಠಾಧೀಶರಷ್ಟೇ ಅಲ್ಲ, ಸನಾತನ ಧರ್ಮದ ಮಠಾಧಿಪತಿಗಳು ಹಾಗೂ ಗುರು-ಹಿರಿಯರು ಖಂಡಿಸುತ್ತೇವೆ. ಮುಂದಿನ ಹೋರಾಟದ ಬಗ್ಗೆ ಯೋಜನೆ ರೂಪಿಸಿದ್ದೇವೆ. ದಾವಣಗೆರೆಯಲ್ಲಿ (3ನೇ ಪುಟಕ್ಕೆ)

# ದಾವಣಗೆರೆ ನೂತನ ಜಿಲ್ಲಾಧಿಕಾರಿಯಾಗಿ ಶಿವಾನಂದ ಕಾಪಾಶಿ



ಬೆಂಗಳೂರು,ಜು.11- ದಾವಣಗೆರೆ ಜಿಲ್ಲೆಗೆ ನೂತನ ಜಿಲ್ಲಾಧಿಕಾರಿ ಯನ್ನಾಗಿ ಶಿವಾನಂದ ಕಾಪಶಿ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ರಾಜ್ಯದ ಒಟ್ಟು 8 ಐಎಎಸ್ ಅಧಿಕಾರಿಗಳನ್ನು ಸರ್ಕಾರ ಇಂದು ವರ್ಗಾವರ್ಗಿ ಮಾಡಿದ್ದು, ದಾವಣಗೆರೆ ಜಿಲ್ಲಾಧಿಕಾರಿಯಾಗಿದ್ದ ಮಹಾಂತೇಶ್ ಬೀಳಗಿ ಅವರನ್ನು ವರ್ಗಾಯಿಸಿದ್ದು, ಸ್ಥಳ ಮತ್ತು ಹುದ್ದೆ ತೋರಿಸಿಲ್ಲ.

ಮೂಲತಃ ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲ್ಲೂಕಿನವರಾದ ಶಿವಾನಂದ ಕಾಪಶಿ ಅವರು ಕೆಎಎಸ್ ಅಧಿಕಾರಿಯಾಗಿದ್ದು, 2018ರಲ್ಲಿ ಐಎಎಸ್ ಹುದ್ದೆಗೆ ಮುಂಬಡ್ತಿ ಪಡೆದು, ಉಡುಪಿ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ, ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದ ರಿಜಿಸ್ಟರ್ ಆಗಿ, ಧಾರವಾಡ ಮತ್ತು (3ನೇ ಪುಟಕ್ಕೆ)

# ದಾವಣಗೆರೆ ವಿ.ವಿ ನೂತನ ಕುಲಪತಿ ಪ್ರೊ. ಕುಂಬಾರ



ದಾವಣಗೆರೆ, ಜು.11- ಕರ್ನಾಟಕ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ತಂತ್ರಜ್ಞಾನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಬಿ.ಡಿ.ಕುಂಬಾರ ಅವರು ದಾವಣಗೆರೆ ವಿಶ್ವವಿದ್ಯಾನಿಲಯದ ನೂತನ ಕುಲಪತಿಯಾಗಿ ನೇಮಕವಾಗಿದ್ದಾರೆ. ಕುಲಪತಿಯಾಗಿದ್ದ ಪ್ರೊ. ಶರಣಪ್ಪ ವಿ.ಹಲಸೆ ಅವರು 2022, ಮಾರ್ಚ್ 26ರಂದು ನಿವೃತ್ತಿಯಾಗಿದ್ದರು. ಇದುವರೆಗೆ ವಾಣಿಜ್ಯ ನಿಕಾಯದ ಡೀನ್ ಪ್ರೊ. ಪಿ.ಲಕ್ಷ್ಮಣ ಅವರು ಹಂಗಾಮಿ ಕುಲಪತಿಯಾಗಿದ್ದರು. ಪ್ರೊ. ಕುಂಬಾರ ಅವರು ಸೋಮವಾರ ವಿಶ್ವವಿದ್ಯಾನಿಲಯದ ನಾಲ್ಕನೇ ಕುಲಪತಿಯಾಗಿ ಅಧಿಕಾರ ವಹಿಸಿಕೊಂಡರು.

# 2023ರಲ್ಲಿ ಜನಸಂಖ್ಯೆಯಲ್ಲಿ ಭಾರತವೇ ಮೊದಲು

ವಿಶ್ವಸಂಸ್ಥೆ, ಜು. 11 – ಮುಂದಿನ ವರ್ಷ 2023ರಲ್ಲಿ ಚೀನಾ ಹಿಂದೆ ಹಾಕಿ ಭಾರತ ವಿಶ್ವದ ಅತಿ ಹೆಚ್ಚಿನ ಜನಸಂಖ್ಯೆಯ ದೇಶವಾಗಲಿದೆ ಎಂದು ವಿಶ್ವ ಸಂಸ್ಥೆ ಅಂದಾಜಿಸಿದೆ.

ವಿಶ್ವ ಜನಸಂಖ್ಯಾ ಅಂದಾಜಿನ ವರದಿ ಬಿಡುಗಡೆ ಮಾಡಿರುವ ವಿಶ್ವಸಂಸ್ಥೆ, ನವೆಂಬರ್ 15, 2022ರ ವೇಳೆಗೆ ವಿಶ್ವದ ಜನಸಂಖ್ಯೆ 800 ಕೋಟಿಗೆ ತಲುಪಲಿದೆ (2ನೇ ಪುಟಕ್ಕೆ)

# 176 ಅಡಿ ತಲುಪಿದ ಭದ್ರಾ ಜಲಾಶಯ

## ಡ್ಯಾಂ ಭರ್ತಿಗೆ 10 ಅಡಿ ಬಾಕಿ : ನಾಳೆ ನಾಲೆಗೆ ನೀರು



ಮಲೇಬೆನ್ನೂರು, ಜು.11- ಭದ್ರಾ ಜಲಾನಯನ ಪ್ರದೇಶದಲ್ಲಿ ಮಳೆ ಮತ್ತೆ ಸುರಿಯುತ್ತಿದ್ದು, ಸೋಮವಾರ ಬೆಳಿಗ್ಗೆ ಜಲಾಶಯಕ್ಕೆ 42 ಸಾವಿರ ಕ್ಯೂಸೆಕ್ಸ್ ನೀರು ಹರಿದು ಬರುತ್ತಿತ್ತು. ಸಂಜೆ ವೇಳೆಗೆ ಜಲಾಶಯದ ನೀರಿನಮಟ್ಟ 176 ಅಡಿ ತಲುಪಿದೆ (2ನೇ ಪುಟಕ್ಕೆ)


## ಐದನೇ ವರ್ಷದ ಪುಣ್ಯಸ್ಮರಣೆ




ಲಿಂಗೈಕ್ಯ : 12.07.2017

**ಶ್ರೀ ಐ.ಪಿ. ಸೋಮನಾಥಾರಾಧ್ಯ**

ಮಾಜಿ ಅಧ್ಯಕ್ಷರು, ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಹಾಗೂ ದಾವಣಗೆರೆ ಕ್ಲಬ್

ನೀವು ತೋರಿದ ಮಾರ್ಗದರ್ಶನ ನಮಗೆ ಸದಾ ದಾರಿ ದೀಪ.
ನಿಮ್ಮ ನೆನಪಿನಲ್ಲಿರುವ...

ಧರ್ಮಪತ್ನಿ : ಶ್ರೀಮತಿ ಐ.ಎಸ್. ಸುವರ್ಣಮ್ಮ, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಆರಾಧ್ಯ ಕುಟುಂಬ ವರ್ಗದವರು ಹಾಗೂ ಬಂಧು-ಮಿತ್ರರು.



# ಇಷ್ಟಲಿಂಗ ನಿತ್ಯ ಧರಿಸಿದರೆ ವೀರಶೈವ

## ಶ್ರೀ ರಂಭಾಪುರಿ ಜಗದ್ಗುರು ಪ್ರಸನ್ನ ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ



ಹರಿಹರ, ಜು. 11 - ಇಷ್ಟಲಿಂಗವನ್ನು ಧರಿಸಿ, ಪೂಜೆಯನ್ನು ಮಾಡುವುದು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಕ್ರಮ. ಹಾಗೆ ಹಣೆಯಲ್ಲಿ ಭಸ್ಮ, ಕೊರಳಲ್ಲಿ ರುದ್ರಾಕ್ಷಿ, ಬಾಯಲ್ಲಿ ಶಿವಪಂಚಾಕ್ಷರಿ ಮಂತ್ರ ಇವು ಇದ್ದರೆ ಮಾತ್ರ ನಾವು ವೀರಶೈವರೇ ಹೊರತು, ಇವುಗಳನ್ನು ಕಳೆದುಕೊಂಡರೆ ನಾವು ವೀರಶೈವರಾಗಲಿಕ್ಕೆ ಸಾಧ್ಯವಿಲ್ಲ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಜಗದ್ಗುರು ಪ್ರಸನ್ನ ವೀರಸೋಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ನಗರದ ದೇವಸ್ಥಾನ ರಸ್ತೆಯ ರೇಣುಕ ಮಂದಿರದಲ್ಲಿ ನಡೆಯುತ್ತಿರುವ ಎರಡನೇ ದಿನದ ಆಷಾಢ ಮಾಸದ ಇಷ್ಟಲಿಂಗ ಮಹಾ ಪೂಜೆ ನೆರವೇರಿಸಿ ಧರ್ಮ ಸಂದೇಶದಲ್ಲಿ ಅವರು ಮಾತನಾಡಿದರು.

ತಂದೆ - ತಾಯಿ ಜನ್ಮ ನೀಡಿದ್ದಾರೆ ಎಂದು ನಾವು ಶ್ರೇಷ್ಠ ಧರ್ಮದಲ್ಲಿ ಹುಟ್ಟಿ ಬಂದಿದ್ದೇವೆ. ಕೆಲವು ವ್ಯಕ್ತಿಗಳು ಶರೀರದ ಮೇಲೆ ಲಿಂಗಧಾರಣೆ ಮಾಡಿಕೊಳ್ಳದೆ ವಂಶದಲ್ಲಿ ಹುಟ್ಟಿದ್ದೇವೆ ಎಂದು ಲೈಸೆನ್ಸ್ ಮಾತ್ರ ಹೊಂದಿ ವೀರಶೈವರು ಎಂದು ಹೇಳಿಕೊಳ್ಳುತ್ತಿದ್ದಾರೆ.

ಇಷ್ಟಲಿಂಗವನ್ನು ನಿತ್ಯವೂ ಧರಿಸಿ ಮೋಕ್ಷದಾಯಕವಾದಂತಹ ಶಿವಪಂಚಾಕ್ಷರಿ ಮಂತ್ರ ಜಪವನ್ನು ಮಾಡುವವರು ನಿಜವಾದ ವೀರಶೈವರಾಗಲು ಯೋಗ್ಯರು ಎಂದು ಶ್ರೀಗಳು ಹೇಳಿದರು.

ಈ ನಗರದಲ್ಲಿ ಮೊದಲು ಒಂದು ತಿಂಗಳ ಕಾಲ ಇಷ್ಟಲಿಂಗ ಪೂಜೆಯನ್ನು ಮಾಡಿದ ಕೀರ್ತಿ ಗಂಗಾಧರ ಶ್ರೀಗಳಿಗೆ ಸಲ್ಲುತ್ತದೆ. ಇನ್ನೂ ಪ್ರತಿವರ್ಷವೂ ಸಹ ಇಷ್ಟಲಿಂಗ ಪೂಜೆ ನೆರವೇರಿಸಿಕೊಂಡು ಹೋಗಲಾಗುವುದು ಎಂದು ರಂಭಾಪುರಿ ಶ್ರೀಗಳು ತಿಳಿಸಿದರು.

ಪುಣ್ಯಕೋಟಿ ಮಠದ ಶ್ರೀ ಜಗದೀಶ್ವರ ಸ್ವಾಮಿಗಳು ಮಾತನಾಡಿ, ಪಂಚಪೀಠಗಳು ಮನುಕುಲದ ಉದ್ಧಾರ ಮಾಡುವುದರ ಜೊತೆಗೆ ನಾಡಿನ ಸಂಸ್ಕೃತಿ, ಪರಂಪರೆಯನ್ನು ಸದಾಕಾಲವೂ ಉಸಿರಾಗಿ ಇಟ್ಟುಕೊಂಡು ಭಕ್ತರ ಬಾಳಿಗೆ ಬೆಳಕನ್ನು ನೀಡುತ್ತಾ ಬಂದಿವೆ ಎಂದರು.

ಈ ಸಮಾರಂಭದಲ್ಲಿ ಮಳಲಿ ಸಂಸ್ಥಾನ ಮಠದ ಶ್ರೀ ನಾಗಭೂಷಣ ಶಿವಾಚಾರ್ಯ ಸ್ವಾಮಿಗಳು, ಎಪಿಎಂಸಿ ಮಾಜಿ ಅಧ್ಯಕ್ಷ ಮಹಾದೇವಪ್ಪ ಗೌಡ್ರು, ಸಿದ್ದಯ್ಯ ಹಿರೇಮಠ, ಹಾಲಸ್ವಾಮಿ ಗುತ್ತೂರು, ಎನ್.ಇ. ಸುರೇಶ್, ಕತ್ತಲಗೇರಿ ಶಿವಯೋಗಿ ಸ್ವಾಮಿ, ಸಮಾ ಚಂದ್ರಪ್ಪ, ಪಂಚಾಕ್ಷರಿ ಕೆ.ಟಿ, ರಾಚಪ್ಪ, ಕೊಟ್ರೇಶ್, ಅಣ್ಣಪ್ಪ ಪೂಜಾರ್, ಕರಿಬಸಪ್ಪ ಕಂಚಿಕೇರಿ, ಹಾಂಸಬಾವಿ ನಾಗರಾಜ್, ಕೊಂಡಜ್ಜಿ ಈಶ್ವರಪ್ಪ ಮತ್ತಿತರರು ಉಪಸ್ಥಿತರಿದ್ದರು.

# ವಿಭಿನ್ನ ವಿಚಾರಗಳಿಂದ ನಾಡು ಕಟ್ಟಿದ್ದ ಎಂಪಿಪಿ



## ಎಂ.ಪಿ.ಪ್ರಕಾಶ್ - 82 ಕಾರ್ಯಕ್ರಮದಲ್ಲಿ ತೆಗ್ಗಿನಮಠ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಶ್ಲಾಘನೆ

ಹರಪನಹಳ್ಳಿ, ಜು. 11 - ಅಪರೂಪದ ಅನನ್ಯ ವ್ಯಕ್ತಿತ್ವದ ಸೃಜನಶೀಲ ಚಿಂತಕ, ಸಾಂಸ್ಕೃತಿಕ ರಾಯಬಾರಿ, ರಂಗಕರ್ಮಿ, ನಟ, ಹಂಪಿ ಉತ್ಸವದ ರೂವಾರಿ, ನಾಡಿನ ಮಾಜಿ ಉಪಮುಖ್ಯಮಂತ್ರಿಯಾಗಿ ವಿಭಿನ್ನ ವಿಚಾರಗಳ ಮೂಲಕ ನಾಡನ್ನು ಕಟ್ಟಿದ ಧೀಮಂತ ವ್ಯಕ್ತಿ ದಿ.ಎಂ.ಪಿ.ಪ್ರಕಾಶ್ ಆಗಿದ್ದರು ಎಂದು ತೆಗ್ಗಿನಮಠ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಪಟ್ಟಣದ ತರಳಬಾಳು ಕಲ್ಯಾಣ ಮಂಟಪದಲ್ಲಿ ಸೋಮವಾರ ಎಂ.ಪಿ.ರವೀಂದ್ರ ಪ್ರತಿಷ್ಠಾನ ಇವರ ಸಹಯೋಗದೊಂದಿಗೆ ಎಂ.ಪಿ. ಪ್ರಕಾಶ್ - 82 ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಎಂ.ಪಿ.ಪ್ರಕಾಶ್‌ರವರ ವಿಚಾರಗಳನ್ನು ಅವರ ಪುತ್ರ ದಿ. ಎಂ.ಪಿ.ರವೀಂದ್ರ ಅವರು ಮುಂದುವರೆಸಿಕೊಂಡು ಹೋಗಿದ್ದಾರೆ. ತಾಲ್ಲೂಕಿನ 371ಜೆ ಕಲಂ, 60 ಕೆರೆಗಳಿಗೆ ನೀರು ತುಂಬಿಸುವುದು ಹಾಗೂ ಗರ್ಭಗುಡಿ ಬ್ರಿಡ್ಜ್ ಕಂ ಬ್ಯಾರೇಜ್‌ಗೆ ಸಾಕಷ್ಟು ಶ್ರಮ ವಹಿಸಿದ್ದಾರೆ. ಅವುಗಳನ್ನು ಪೂರ್ಣಗೊಳಿಸಲಿ ಎಂದು ಹೇಳಿದರು.

ಕಲ್ಯಾಣ ಕರ್ನಾಟಕದ 371ಜೆ ಹೋರಾಟ ಸಮಿತಿ ಉಪಾಧ್ಯಕ್ಷ ಅಬ್ದುಲ್ ರಜಾಕ್ ಉಸ್ತಾದ್ ಮಾತನಾಡಿ, ಜೀವನದ ದಿಕ್ಕನ್ನು ಬದಲಾವಣೆ ಮಾಡಲು ಶಿಕ್ಷಣದಿಂದ ಮಾತ್ರ ಸಾಧ್ಯ, ಕಠಿಣ ಶ್ರಮದಿಂದ ಮಾತ್ರ ಉನ್ನತ ಶಿಕ್ಷಣದಲ್ಲಿ ಯಶಸ್ಸು ಕಾಣಲು ಸಾಧ್ಯ. ಎಂದ ಅವರು ಇಂದು ದೇಶದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಒಟ್ಟಾರೆಯಾಗಿ ಹಿಂದೆ ಇರುವ ಕೊರಗು ಇದೆ. ಜಿಲ್ಲಾ, ರಾಜ್ಯ ಮಟ್ಟದಲ್ಲಿ ಸಮೀಕ್ಷೆಯ ಪ್ರಕಾರ ಉನ್ನತ ವ್ಯಾಸಂಗ ಮಾಡುವವರ ಸಂಖ್ಯೆ ಶೇ 26ರಷ್ಟಿದೆ. ರಾಜ್ಯದಲ್ಲಿ ಶೇ.28 ಪದವಿ ಮಾಡುತ್ತಿದ್ದಾರೆ. ನಮ್ಮ ಕಲ್ಯಾಣ ಕರ್ನಾಟಕದಲ್ಲಿ ಸರಾಸರಿ 7ರಷ್ಟು ಇದ್ದು ಇದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದರು.

ಬಡತನ, ಶೈಕ್ಷಣಿಕ ಮೂಲಭೂತ ಸೌಲಭ್ಯಗಳ ಕೊರತೆಗಳು ಅಂಕೆ, ಸಂಖ್ಯೆ ಕಡಿಮೆಯಾಗಿದ್ದು, ಕನಿಷ್ಠ ರಾಜ್ಯ ಮಟ್ಟದ ಸರಾಸರಿ ತುಂಬಲು ತಾವೆಲ್ಲರು ಉನ್ನತ ಶಿಕ್ಷಣ ಪಡೆಯಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

371ಜೆ ಕಲಂ ಸೌಲಭ್ಯಕ್ಕಾಗಿ ಗದಗ ಹಾಗೂ ಬಳ್ಳಾರಿಗೆ ಮೊಳಕಾಲ್ಮೂರು ಸೇರ್ಪಡೆಗೆ ಮುಂದಾಗಿರುವುದನ್ನು ಈ ಭಾಗದ ಜನ ವಿರೋಧಿಸಿದ್ದಾರೆ. ಆದರೆ ಹರಪನಹಳ್ಳಿ ಸೇರ್ಪಡೆಗೆ ಸ್ವಾಗತಿಸಿದ್ದು, ಎಷ್ಟೇ ವಿರೋಧವಿದ್ದರೂ ಹರಪನಹಳ್ಳಿ 371ಜೆ ಕಲಂ ಅಡಿಯಲ್ಲಿ ಸೇರ್ಪಡೆಗೆ ಪ್ರಯತ್ನಪಟ್ಟವರು ದಿ.ಎಂ.ಪಿ.ರವೀಂದ್ರರವರು. ಇದನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಬೇಕು, ಇದರ ಸಾರ್ಥಕತೆ ಅವರಿಗೆ ಸಲ್ಲುತ್ತದೆ ಎಂದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ಪಿ.ಲತಾ ಮಾತನಾಡಿದರು. ಈ ಸಂದರ್ಭದಲ್ಲಿ ನಿವೃತ್ತ ಇಓ ಕೊಟ್ರಯ್ಯ, ಗೌತಮ, ಕೆ.ಎಂ. ಬಸವರಾಜಯ್ಯ, ಅಲಗಿಲವಾಡ ವಿಶ್ವನಾಥ, ಜಯಲಕ್ಷ್ಮಿ, ಕವಿತಾ, ನೇತ್ರಾವತಿ, ರತ್ನಮ್ಮ, ಮೈದೂರು ರಾಮಣ್ಣ, ಉದಯಕುಮಾರ, ಮತ್ತೂರು ಬಸವರಾಜ, ಸಾಸ್ವಿಹಳ್ಳಿ ನಾಗರಾಜ, ಶಿವರಾಜ, ನಿಟ್ಟೂರು ಹನುಮಂತ, ಪ್ರಸಾದ ಕವಾಡಿ ಸೇರಿದಂತೆ ಇತರರು ಇದ್ದರು.

## ಬೆಳ್ಳೂಡಿ ಗ್ರಾ.ಪಂ. ಅಧ್ಯಕ್ಷರಾಗಿ ಸುಧಾ ಶಿವಕುಮಾರ್



ಮಲೇಬೆನ್ನೂರು, ಜು.11- ಬೆಳ್ಳೂಡಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಶ್ರೀಮತಿ ಸುಧಾ ಶಿವಕುಮಾರ್ ಅವರು ಸೋಮವಾರ ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಸುಧಾ ಶಿವಕುಮಾರ್ ಅವರು 15 ಮತಗಳನ್ನು ಪಡೆದು ಆಯ್ಕೆಯಾದರೆ, ಪ್ರತಿಸ್ಪರ್ಧಿ ಶ್ರೀಮತಿ ಗೀತಮ್ಮ ನಾಗರಾಜಪ್ಪ ಅವರು 8 ಮತಗಳನ್ನು ಪಡೆದು ಪರಾಭವಗೊಂಡರು. ಶ್ರೀಮತಿ ನಾಗಮ್ಮ ಭೀರಪ್ಪ ಅವರನ್ನು ಅವಿಶ್ವಾಸದ ಮೂಲಕ ಪದಚ್ಯುತಿಗೊಳಿಸಿದ್ದರಿಂದ ಅಧ್ಯಕ್ಷ ಸ್ಥಾನ ತೆರವಾಗಿತ್ತು.

ನೀರಾವರಿ ಇಲಾಖೆಯ ಎಇಇ ಶಶಿಧರ್ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಗ್ರಾ.ಪಂ. ಉಪಾಧ್ಯಕ್ಷ ಕೆ.ಹೆಚ್.ಮಂಜಪ್ಪ, ಪಿಡಿಓ ಶಿವಪ್ಪ ಬಿರಾದಾರ್ ಮತ್ತಿತರರು ಉಪಸ್ಥಿತರಿದ್ದರು.

## ರಾಣೇಬೆನ್ನೂರು : ಒಂಟಿ ಮನೆ ಮೇಲೆ ದರೋಡೆಕೋರರ ದಾಳಿ



ರಾಣೇಬೆನ್ನೂರು, ಜು.11- ನಗರದ ಹೊರವಲಯದ ಹಳೇ ಪಿ.ಬಿ. ರಸ್ತೆಯ ನಂದಿ ಲೇಔಟ್ ಎದುರು ಒಂಟಿ ಮನೆಗೆ ನಿನ್ನೆ ರಾತ್ರಿ 8.30ರ ಸಮಯದಲ್ಲಿ ಸುಮಾರು 13 ಜನರಿದ್ದ ದರೋಡೆಕೋರರ ತಂಡ ನುಗ್ಗಿ ಮನೆಯಲ್ಲಿದ್ದವರಿಗೆ ಚಾಕು, ಮಚ್ಚು ತೋರಿಸಿ ಅವರ ಕೈಕಟ್ಟಿ ಹೆಣ್ಣು ಮಕ್ಕಳ ಕೊರಳಲ್ಲಿದ್ದ ಸುಮಾರು 3 ಲಕ್ಷಕ್ಕೂ ಹೆಚ್ಚು ಬೆಲೆಬಾಳುವ ಮಾಂಗಲ್ಯ ಸರ, ನಗದು, ಉಂಗುರ ದೋಚಿದ್ದಾರೆ.ಮನೆ ಯಜಮಾನ ಅಜ್ಜಪ್ಪ ಅವರಿಂದ ದೂರು ಪಡೆದಿರುವ ಹಲಗೇರಿ ಠಾಣೆ ಎಸ್.ಐ ಮೇಘರಾಜ್ ಅವರು ದೂರು ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

## ರಸ್ತೆಯಲ್ಲಿ ಒಳಚರಂಡಿ ನೀರು : ದುರಸ್ತಿ



ದಾವಣಗೆರೆ, ಜು.11- ನಗರದ ರಾಷ್ಟ್ರೀಯ ಹೆದ್ದಾರಿಯಿಂದ ಶಿರಮಗೊಂಡನಹಳ್ಳಿಗೆ ಹೋಗುವ ರಸ್ತೆಯಲ್ಲಿ ಹರಿಯುತ್ತಿದ್ದ ಒಳ ಚರಂಡಿ ನೀರಿನ ದುರ್ವಾಸನೆಯಿಂದಾಗಿ ಬರುತ್ತಿದ್ದ ದೂರುಗಳ ಹಿನ್ನೆಲೆಯಲ್ಲಿ ಮಹಾನಗರ ಪಾಲಿಕೆ ಸತತ ಮೂರು ದಿನಗಳಿಂದ ದುರಸ್ತಿ ಕಾರ್ಯ ಕೈಗೊಂಡಿದೆ.

ಮಹಾಪೌರರಾದ ಶ್ರೀಮತಿ ಜಯಮ್ಮ ಗೋಪಿನಾಯ್ಕ ಅವರು ಸ್ವತಃ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರಲ್ಲದೇ, ತಕ್ಷಣವೇ ದುರಸ್ತಿ ಕಾರ್ಯಕ್ಕೆ ನಿರ್ದೇಶನ ನೀಡಿದ್ದಾರೆ.

## ಜನಸಂಖ್ಯೆಯಲ್ಲಿ ಭಾರತವೇ ಮೊದಲು

**(1ನೇ ಪುಟದಿಂದ)** ಎಂದು ಹೇಳಿದೆ.

1950ರ ನಂತರ ಜಾಗತಿಕ ಜನಸಂಖ್ಯಾ ಬೆಳವಣಿಗೆ ಅತಿ ಕಡಿಮೆ ಹಂತದಲ್ಲಿದೆ. 2020ರಲ್ಲಿ ಜನಸಂಖ್ಯಾ ಬೆಳವಣಿಗೆ ಶೇ.1ಕ್ಕಿಂತಲೂ ಕಡಿಮೆ ಇದೆ. 2023ರಲ್ಲಿ ಚೀನಾವನ್ನು ಹಿಂದೆ ಹಾಕಿ ಭಾರತ ವಿಶ್ವದ ಅತಿ ಹೆಚ್ಚಿನ ಜನಸಂಖ್ಯೆ ಹೊಂದಿರುವ ದೇಶವಾಗಲಿದೆ ಎಂದು ಇದೇ ವರದಿಯಲ್ಲಿ ಹೇಳಲಾಗಿದೆ.

ಪೂರ್ವ ಹಾಗೂ ಆಗ್ನೇಯ ಏಷಿಯಾ ವಲಯಗಳು ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಪ್ರದೇಶಗಳಾಗಿವೆ. ಈ ಪ್ರದೇಶದಲ್ಲಿ 230 ಕೋಟಿ ಜನ ಇದ್ದಾರೆ. ಇದು ಜಗತ್ತಿನ ಒಟ್ಟು ಜನಸಂಖ್ಯೆಯ ಶೇ.29 ಆಗಿದೆ. ಮಧ್ಯ ಹಾಗೂ ದಕ್ಷಿಣ ಏಷಿಯಾ ವಲಯದಲ್ಲಿ 210 ಕೋಟಿ ಜನರಿದ್ದು, ಇದು ಒಟ್ಟು ಜನಸಂಖ್ಯೆಯ ಶೇ.26 ಆಗಿದೆ. ಚೀನ ಹಾಗೂ ಭಾರತ ವಿಶ್ವದಲ್ಲೇ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶಗಳಾಗಲಿವೆ. 2020ರಲ್ಲಿ ಎರಡೂ ದೇಶಗಳ ಜನಸಂಖ್ಯೆ 140 ಕೋಟಿ ಆಗಿರಲಿದೆ ಎಂದು ವರದಿ ತಿಳಿಸಿದೆ. 2022ರಲ್ಲಿ ಭಾರತದ ಜನಸಂಖ್ಯೆ 141 ಕೋಟಿ ಹಾಗೂ ಚೀನಾದ ಜನಸಂಖ್ಯೆ 142 ಕೋಟಿ ಎಂದು ಅಂದಾಜಿಸಲಾಗಿದೆ. ಮುಂದಿನ ವರ್ಷ ಜನಸಂಖ್ಯೆಯಲ್ಲಿ ಚೀನಾವನ್ನು ಭಾರತ ಹಿಂದೆ ಹಾಕಲಿದೆ. 2050ರ ವೇಳೆಗೆ ಭಾರತದ ಜನಸಂಖ್ಯೆ 166 ಕೋಟಿ ಆಗಿದ್ದರೆ, ಚೀನಾದ ಜನಸಂಖ್ಯೆ 131 ಕೋಟಿ ಆಗಲಿದೆ ಎಂದು ವರದಿ ತಿಳಿಸಿದೆ.

## ಬಾಪೂಜಿ ಹೈಟೆಕ್ ಎಜುಕೇಷನ್ ಕಾಲೇಜಿನಲ್ಲಿ ಇಂದು ಕೆರಿಯರ್ ಡೆವಲಪ್‌ಮೆಂಟ್ ಟ್ರೈನಿಂಗ್

ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈಟೆಕ್ ಎಜುಕೇಷನ್ ಕಾಲೇಜಿನಲ್ಲಿ ಬಿಸಿಎ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಇಂದಿನಿಂದ ಐದು ದಿನಗಳವರೆಗೆ ಕೆರಿಯರ್ ಡೆವಲಪ್‌ಮೆಂಟ್ ಟ್ರೈನಿಂಗ್ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಇಂದು ಬೆಳಿಗ್ಗೆ 9 ಕ್ಕೆ ಬಾಪೂಜಿ ಬಿ ಸ್ಕೂಲ್ಸ್ ನಿರ್ದೇಶಕ ಡಾ. ಸ್ವಾಮಿ ತ್ರಿಭುವಾನಂದ ಕಾರ್ಯಕ್ರಮ ಉದ್ಘಾಟಿಸುವರು. ಅಂತರರಾಷ್ಟ್ರೀಯ ತರಬೇತಿ ಸಂಸ್ಥೆಯಾದ ಕೊಯಮತ್ತೂರು ಫೋಕಸ್ ಅಕಾಡೆಮಿ ಆಫ್ ಕೆರಿಯರ್ ಡೆವಲಪ್‌ಮೆಂಟ್ ವತಿಯಿಂದ ಸಂಪನ್ಮೂಲ ವ್ಯಕ್ತಿಗಳು ಆಗಮಿಸಲಿದ್ದಾರೆ ಎಂದು ಕಾರ್ಯಕ್ರಮ ಸಂಯೋಜಕ ಕೆ.ಎಸ್.ಮುನವಳ್ಳಿ ಮಠ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಶಿವ ಬ್ಯಾಂಕ್‌ನಿಂದ ಅವಿನಾಶ್ ವಿ. ರಾವ್‌ಗೆ ಅಭಿನಂದನೆ



ಯುಪಿಎಸ್‌ಸಿ ಪರೀಕ್ಷೆಯಲ್ಲಿ ರಾಷ್ಟ್ರಮಟ್ಟದಲ್ಲಿ 31ನೇ ರ್‍ಯಾಂಕ್ ಹಾಗೂ ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಗಳಿಸಿರುವ ಪ್ರತಿಭಾನ್ವಿತ ಅವಿನಾಶ್ ವಿ. ರಾವ್ ಅವರನ್ನು ಶಿವ ಸಹಕಾರಿ ಬ್ಯಾಂಕ್ ವತಿಯಿಂದ ಬ್ಯಾಂಕಿನ ಸಭಾಂಗಣದಲ್ಲಿ ಇಂದು ಸಂಜೆ 6.30ಕ್ಕೆ ಅಭಿನಂದನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಸಮಾರಂಭದ ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷ ಎಂ.ಬಿ. ಸಂಗಮೇಶ್ವರಗೌಡರು ವಹಿಸುವರು. ಬ್ಯಾಂಕಿನ ಉಪಾಧ್ಯಕ್ಷ ಐಗೂರು ಚಂದ್ರಶೇಖರ್ ಅಭಿನಂದನಾ ಭಾಷಣ ಮಾಡುವರು. ಬ್ಯಾಂಕಿನ ಹಾಲಿ ಹಾಗೂ ಮಾಜಿ ನಿರ್ದೇಶಕರು, ವ್ಯವಸ್ಥಾಪನಾ ಮಂಡಳಿಯ ಸದಸ್ಯರು, ಬ್ಯಾಂಕಿನ ಸದಸ್ಯರು, ಗ್ರಾಹಕರು, ಸಿಬ್ಬಂದಿ ವರ್ಗದವರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಪ್ರಧಾನ ವ್ಯವಸ್ಥಾಪಕ ಎ.ಆರ್. ಸಿದ್ದರಾಮಪ್ಪ ಕೋರಿದ್ದಾರೆ.

## ಶಿರಡಿ ಮಂದಿರದಲ್ಲಿ ಗುರು ಪೂರ್ಣಿಮೆ

ದಾವಣಗೆರೆ, ಜು.11- ನಗರದ ಎಂ.ಸಿ.ಸಿ. 'ಎ' ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ನಾಡಿದ್ದು ದಿನಾಂಕ 13ರ ಬುಧವಾರ ಗುರುಪೂರ್ಣಿಮೆ ಉತ್ಸವವನ್ನು ಆಚರಿಸಲಾಗುವುದು.

ಅಂದು ಬೆಳಿಗ್ಗೆ 6 ಗಂಟೆಗೆ ಕಾಕಡಾರತಿ, 9 ಗಂಟೆಗೆ ದೀಪಾರಾಧನೆ, ಕಲಶ ಸ್ಥಾಪನೆ, ನಂತರ ಗೋಪುರ ಧ್ವಜಾರೋಹಣ, ಬೆಳಿಗ್ಗೆ 7 ರಿಂದ 2.30 ರವರೆಗೆ ಬಾಬಾರವರ ಬೆಳ್ಳಿಯ ಮೂರ್ತಿಗೆ ಹಾಲಿನ ಅಭಿಷೇಕ, ವಿಶೇಷ ಪೂಜೆ, ಅಲಂಕಾರ ಹಾಗೂ ಮಹಾಮಂಗಳಾರತಿ ನಡೆಸಲಾಗುವುದು. ಅಂದು ಬೆಳಿಗ್ಗೆ 8 ರಿಂದ ಸಂಜೆ 6 ರವರೆಗೆ ಭಜನೆ ನಡೆಯುವುದು. ಅಂದು ರಾತ್ರಿ 8.30 ಕ್ಕೆ ಪಾಲಕಿ ಉತ್ಸವ, ಧುನಿ ಪೂಜೆ, ಶೇಜಾರತಿ ನಡೆಯುವುದು.

## ನಗರದಲ್ಲಿ ಇಂದು ಜಯದೇವಶ್ರೀ, ಶೂನ್ಯಪೀಠ ಪ್ರಶಸ್ತಿ ಪ್ರದಾನ

ಲಿಂ. ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ ಸ್ಮರಣೋತ್ಸವದ ಅಂಗವಾಗಿ ಇಂದು ಸಂಜೆ 6.30 ಕ್ಕೆ ಶಿವಯೋಗಾಶ್ರಮದ ಒಳಾಂಗಣ ಸಭಾಂಗಣದಲ್ಲಿ ಸಾಧಕರ ಸಮಾವೇಶ, ಜಯದೇವಶ್ರೀ ಹಾಗೂ ಶೂನ್ಯಪೀಠ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಲಾಗಿದೆ.

ಇಳಕಲ್ ಶ್ರೀ ಚಿತ್ತರಗಿ ವಿಜಯ ಮಹಾಂತೇಶ್ವರ ಸಂಸ್ಥಾನ ಮಠದ ಶ್ರೀ ಗುರುಮಹಾಂತ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ಮಾಜಿ ಸಿಎಂ ಸಿದ್ದರಾಮಯ್ಯ 'ಜಯ ದೇವಶ್ರೀ' ಹಾಗೂ ವಿಧಾನ ಪರಿಷತ್ ಮಾಜಿ ಸಭಾಪತಿ ಡಿ.ಹೆಚ್. ಶಂಕರಮೂರ್ತಿ 'ಶೂನ್ಯಪೀಠ' ಪ್ರಶಸ್ತಿಯನ್ನು, ಪ್ರೊ. ಭಿಕ್ಷಾವರ್ತಿಮಠ 'ಶೂನ್ಯಪೀಠ ಚನ್ನಬಸವ', ಸ್ವಾತಂತ್ರ್ಯ ಹೋರಾಟಗಾರ್ತಿ ಚನ್ನಮ್ಮ ಹಳ್ಳಿಕೇರಿ 'ಶೂನ್ಯಪೀಠ ಅಕ್ಕನಾಗಮ್ಮ'ಪ್ರಶಸ್ತಿ ಸ್ವೀಕರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಎಸ್.ಎಸ್. ಮಲ್ಲಿಕಾರ್ಜುನ್, ಎಸ್. ರಾಮಪ್ಪ, ಅಬ್ದುಲ್ ಜಬ್ಬಾರ್, ಸೈಯದ್ ಸೈಫುಲ್ಲಾ, ಬಿ. ವೀರಣ್ಣ ಆಗಮಿಸಲಿದ್ದಾರೆ.

## ಸರ್ಕಾರಿ ನೌಕರರ ಸಂಘದಿಂದ ಪುರಸ್ಕಾರ

ದಾವಣಗೆರೆ, ಜು. 11- ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ. 90 ಕ್ಕಿಂತ ಹೆಚ್ಚು ಅಂಕ ಪಡೆದ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದು ಸಂಘದ ಜಿಲ್ಲಾಧ್ಯಕ್ಷ ಬಿ. ಪಾಲಾಕ್ಷಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಇದೇ ದಿನಾಂಕ 15 ರೊಳಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಪತ್ರಿಕಾಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಸಿ. ಗುರುಮೂರ್ತಿ, ಖಜಾಂಚಿ ಪಿ.ಆರ್. ತಿಪ್ಪೇಸ್ವಾಮಿ, ಗೌರವಾಧ್ಯಕ್ಷ ಡಾ. ಜಿ. ಉಮೇಶ್, ವೇಣು ಉಪಸ್ಥಿತರಿದ್ದರು.

# ರಾಣೇಬೆನ್ನೂರು ಅಭಿವೃದ್ಧಿಗೆ ನೂರು ಕೋಟಿ ಅನುದಾನ

ರಾಣೇಬೆನ್ನೂರ, ಜು.11- ಕೊರೋನಾ ಆರ್ಥಿಕ ಸಂಕಷ್ಟ ಸಮಯದಲ್ಲಿ ಸರ್ಕಾರ ನೂರು ಕೋಟಿಗೂ ಅಧಿಕ ಅನುದಾನವನ್ನು ನಗರದ ಅಭಿವೃದ್ಧಿಗೆ ನೀಡಿದೆ ಎಂದು ಶಾಸಕ ಅರುಣಕುಮಾರ ಪೂಜಾರ ಹೇಳಿದರು.

ನಗರದ ಮೃತ್ಯುಂಜಯ ಸಭಾ ಭವನದಲ್ಲಿ ಸೋಮವಾರ ಜಿ.ಪಂ., ತಾ.ಪಂ. ಹಾಗೂ ಗ್ರಾ. ಪಂ. ಸಹಯೋಗದಲ್ಲಿ ಬಸವ ವಸತಿ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆಯಡಿ ಅನುಮೋದನೆಯಾದ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ನಗರ ಅಭಿವೃದ್ಧಿಗೆ ಈ ಹಿಂದಿನ ಸಿಎಂ ಯಡಿಯೂರಪ್ಪ, ಈಗಿನ ಸಿಎಂ ಬಸವರಾಜ ಬೊಮ್ಮಾಯಿ, ಪಂಚಾಯತ್ ರಾಜ್ಯ ಇಲಾಖೆಯಿಂದ ನೂರು ಕೋಟಿ ಅಧಿಕ ಅನುದಾನವನ್ನು ಬಿಡುಗಡೆ ಮಾಡಿದ್ದು, ನಗರಾಭಿವೃದ್ಧಿಗೆ ಶ್ರಮಿಸಿದ್ದಾರೆ. ಇದೇ ರೀತಿ ವಿಧಾನಪರಿಷತ್ ಸದಸ್ಯ ಆರ್.ಶಂಕರ್ ಜೊತೆಗೂಡಿ ತಾಲ್ಲೂಕಿನ ಸಮಗ್ರ ಅಭಿವೃದ್ಧಿಗೆ ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ಇಡೀ ರಾಜ್ಯಕ್ಕೆ ಮಾದರಿ ತಾಲ್ಲೂಕನ್ನಾಗಿ ಮಾಡುವ ಇಚ್ಛೆ ಹೊಂದಿದ್ದು ಇದಕ್ಕೆ ಜನರ ಸಹಕಾರ ಅತೀ ಮುಖ್ಯವಾಗಿದೆ ಎಂದರು.

ಅನಾವೃಷ್ಟಿಯಿಂದ ರೈತರು ಬೆಳೆದ ಬೆಳೆ ಬಾರದ ಹಿನ್ನೆಲೆಯಲ್ಲಿ 19.800 ರೈತರಿಗೆ ಬೆಳೆ ಪರಿಹಾರ ನೀಡಲು ಶ್ರಮಿಸಿದ್ದೇನೆ. ಡಿ.9ರಂದು ಶಾಸಕನನ್ನಾಗಿ ಮೂರು ವರ್ಷವಾಗುತ್ತೆ. ಆ ಸಮಯದಲ್ಲಿ ತಾಲ್ಲೂಕಿನಲ್ಲಿ ಯಾವ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇನೆ ಎನ್ನುವುದನ್ನು ಜನರ ಮುಂದೆ ತರುತ್ತೇನೆ ಎಂದರು. ಗ್ರಾಮೀಣ ಭಾಗದಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಮನೆ ಕಟ್ಟಲು ಉಚಿತವಾಗಿ ಮರಳು ವಿತರಿಸಲಾಗುವುದು. ಇನ್ನೂ ಕಾರ್ಮಿಕ ಕಾರ್ಡ್ ಹೊಂದಿದ್ದವರಿಗೆ ಮನೆ ಕಟ್ಟಲು 2 ಲಕ್ಷ ಸಹಾಯಧನ ನೀಡಲಾಗುತ್ತದೆ. ಅರ್ಹ ಫಲಾನುಭವಿಗಳು ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಈ ಹಿಂದಿನ ಸರ್ಕಾರದ ಹಗರಣದಿಂದಾಗಿ ಮನೆ ನೀಡಲು ತಡವಾಗಿತ್ತು. ಅದನ್ನು ಬಗ್ಗೆಹರಿಸಿ ವಸತಿ ಸಚಿವ ವಿ.ಸೋಮಣ್ಣ ಮನೆಗಳನ್ನು ನೀಡಿದ್ದಾರೆ. ದುಡ್ಡು ಮಾಡಬೇಕೆಂದು ರಾಜಕಾರಣಕ್ಕೆ ಬಂದಿಲ್ಲ. ಜನಸೇವೆ ಮಾಡಬೇಕು ಅಂತಹ ರಾಜಕಾರಣಕ್ಕೆ ಬಂದಿದ್ದೇನೆ. ಟೀಕೆಗಳಿಗೆ ಉತ್ತರಿಸುವ ಬದಲು ಕೆಲಸದ ಮೂಲಕ ತೋರಿಸುತ್ತೇನೆ. ಸದಾ ಬಡಜನರ ಏಳಿಗ್ಗೆಗಾಗಿ ಶ್ರಮಿಸುತ್ತಿದ್ದೇನೆ ಎಂದರು.

ಇದೇ ಸಂದರ್ಭದಲ್ಲಿ 810 ಫಲಾನುಭವಿಗಳಿಗೆ ವಸತಿ ಹಕ್ಕುಪತ್ರ ವಿತರಣೆ ಮಾಡಲಾಯಿತು.

ವಿಧಾನಪರಿಷತ್ ಸದಸ್ಯ ಆರ್.ಶಂಕರ್, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ ನರಸಗೊಂಡರ, ನಗರಸಭೆ ಸದಸ್ಯೆ ಸುಮಂಗಲಾ ಪಾಟೀಲ, ಬಸವರಾಜ ಹುಲ್ಲತ್ತಿ, ಬಸವರಾಜ ಚಳಗೇರಿ, ತಾಪಂ ಇಓ ಟಿ.ಆರ್. ಮಲ್ಲಾಡದ, ಗ್ರಾಪಂ ಅಧ್ಯಕ್ಷ ಚೇತನ ಪೂಜಾರ ಸೇರಿದಂತೆ ಮತ್ತಿತರರು ಇದ್ದರು.

## ಅಮೃತ ಮಹೋತ್ಸವ : ನಗರದಲ್ಲಿಂದು ಸಭೆ

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ 75ನೇ ಹುಟ್ಟು ಹಬ್ಬದ ಅಮೃತ ಮಹೋತ್ಸವದ ಸಭೆಯನ್ನು ಇಂದು ಬೆಳಿಗ್ಗೆ 11 ಗಂಟೆಗೆ ಶ್ರೀ ಬೀರಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ಕರೆಯಲಾಗಿದೆ. ಅಹಿಂದ, ಹಿಂದುಳಿದ ಜಾತಿಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಎಂ. ರಾಮಚಂದ್ರಪ್ಪ ಅವರ ನೇತೃತ್ವದಲ್ಲಿ ಈ ಸಭೆ ನಡೆಯಲಿದೆ.

## ನಗರಕ್ಕೆ ಇಂದು ಮಾಜಿ ಸಿಎಂ ಸಿದ್ಧರಾಮಯ್ಯ

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಮಧ್ಯಾಹ್ನ 1.30 ಕ್ಕೆ ನಗರಕ್ಕೆ ಆಗಮಿಸಿ, ಸಂಜೆ 6.30 ಕ್ಕೆ ಶಿವಯೋಗಾಶ್ರಮದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸುವರು.


॥ ಶ್ರೀ ವೀರಭದ್ರೇಶ್ವರ ಸ್ವಾಮಿ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ಸಿಟಿ,
ಹಳೇ ಬಂಬೂಬಜಾರ್ ವಾಸಿಗಳಾದ
**ಶ್ರೀ ಜಾಲಿಮರದ ವೀರಪ್ಪ**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 04.07.2022ನೇ
ಸೋಮವಾರ ಸಂಜೆ 4 ಗಂಟೆಗೆ ನನ್ನ
ಧರ್ಮಪತ್ನಿಯಾದ
**ಶ್ರೀಮತಿ ಶೈಲಾ ಜೆ.ವಿ.**
ಇವರು ಲಿಂಗೈಕ್ಯರಾದ ಪ್ರಯುಕ್ತ
ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು** ದಿನಾಂಕ 12.07.2022ರ **ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗೃಹ, ಹಳೇ ಬಂಬೂಬಜಾರ್, ದಾವಣಗೆರೆ** ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು: **ಜಾಲಿಮರದ ವಂಶಸ್ಥರು ಹಾಗೂ ಬಂಧು-ಮಿತ್ರರು.**
**ಮೊ: 91649 45045**



**10ನೇ ವರ್ಷದ ಪುಣ್ಯಸ್ಮರಣೆ**




**ಲಿಂ. ಜಕ್ಕ ಪಿ. ನಾರಾಯಣಪ್ಪನವರು**

ನೀವು ನಮ್ಮನ್ನಗಲಿ ಇಂದಿಗೆ (12.7.2022) ಹತ್ತು ವರ್ಷಗಳಾದವು.
ನಿಮ್ಮ ನೆನಪು ಸದಾ ನಮ್ಮ ಮನದಲ್ಲಿ ಅಚ್ಚಳಿಯದೇ ಉಳಿದಿದೆ.
ನಿಮ್ಮ ವ್ಯಕ್ತಿತ್ವ, ಮಾರ್ಗದರ್ಶನ ಹಾಗೂ ಆಶೀರ್ವಾದದೊಂದಿಗೆ
ಮುನ್ನಡೆಯುತ್ತಿರುವ ಮತ್ತು ಸದಾ ನಿಮ್ಮ ಸ್ಮರಣೆಯಲ್ಲಿರುವ,
ಪತ್ನಿ : **ಪದ್ದಮ್ಮ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.**


## ತಾಲ್ಲೂಕು ಕಚೇರಿಗೆ ಇಂದು ಜಿಲ್ಲಾಧಿಕಾರಿ ಭೇಟಿ

ದಾವಣಗೆರೆ ತಾಲ್ಲೂಕಿನ ಸಾರ್ವಜನಿಕರ ಕುಂದು ಕೊರತೆಗಳನ್ನು ಆಲಿಸಲು ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ರವರೆಗೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಭೇಟಿ ನೀಡಲಿದ್ದಾರೆ. ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಸಲ್ಲಿಸಿ ಕುಂದುಕೊರತೆಗಳನ್ನು ಪರಿಹರಿಸಿಕೊಳ್ಳಬಹುದು ಎಂದು ತಹಶೀಲ್ದಾರ್ ತಿಳಿಸಿದ್ದಾರೆ.

**36ನೇ ವರ್ಷದ ಪುಣ್ಯಸ್ಮರಣೆ**

**ದಿ॥ ಜಿ. ರುದ್ರಪ್ಪ**

ಬಾಂಬೆ ಆರ್ ಸನ್ಸ್ ಕಂಪನಿಯ ಮಾಲೀಕರು, ದಾವಣಗೆರೆ.
*ನೀವು ನಮ್ಮನ್ನಗಲಿ ಇಂದಿಗೆ 36 ವರ್ಷಗಳಾದವು.*
*ನಾವುಗಳೆಲ್ಲರೂ ನಿಮ್ಮ ಆಶೀರ್ವಾದವನ್ನು ಹೊತ್ತು,*
*ನೀವು ತೋರಿಸಿದ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ ಬಂದಿರುವ*
*ಹಾಗೂ ಸದಾ ನಿಮ್ಮ ಸ್ಮರಣೆಯಲ್ಲಿರುವ...*
ಮಗಳು-ಅಳಿಯ : **ಶೋಭಾ ವೆಂಕೋಬಪ್ಪ**
ನಿ. ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, ದಾವಣಗೆರೆ.
**ರಶ್ಮಿ ತಿಪ್ಪೇಸ್ವಾಮಿ, ಪೂಜಾ ಅಭಿಷೇಕ್ ಮತ್ತು ಮಕ್ಕಳು, ಸೊಸೆ, ಮೊಮ್ಮಕ್ಕಳು ಹಾಗೂ ಮರಿಮೊಮ್ಮಕ್ಕಳು, ವಿದ್ಯಾನಗರ, ದಾವಣಗೆರೆ.**


## 176 ಅಡಿ ತಲುಪಿದ ಭದ್ರಾ

**(1ನೇ ಪುಟದಿಂದ)** ಎನ್ನಲಾಗಿದ್ದು, ಜಲಾಶಯ ಭರ್ತಿಗೆ 10 ಅಡಿ ಮಾತ್ರ ಬಾಕಿ ಇದೆ. ಜಲಾಶಯದ ಮಟ್ಟ ಗರಿಷ್ಟ 186 ಅಡಿ ಆಗಿರುತ್ತದೆ. ಕಳೆದ ವರ್ಷ ಈ ದಿನ ಜಲಾಶಯದಲ್ಲಿ 156 ಅಡಿ ನೀರಿತ್ತು. ಕಳೆದ ವರ್ಷಕ್ಕಿಂತ ಈ ವರ್ಷ 20 ಅಡಿ ನೀರು ಹೆಚ್ಚು ಸಂಗ್ರಹವಾಗಿರುವುದು ಅಚ್ಚುಕಟ್ಟಿನ ರೈತರಲ್ಲಿ ಇನ್ನಿಲ್ಲದ ಸಂತಸ ತಂದಿದೆ.

**ನಾಲೆಗೆ ನೀರು :** ಭದ್ರಾ ಕಾಡಾ ಸಮಿತಿ ಅಧ್ಯಕ್ಷರಾದ ಶ್ರೀಮತಿ ಪವಿತ್ರ ರಾಮಯ್ಯ ಅವರು, ಭದ್ರಾ ಅಧೀಕ್ಷಕ ಇಂಜಿನಿಯರ್‌ಗೆ ಪತ್ರ ಬರೆದು, ಜು.12 ರ ಮಂಗಳವಾರ ಮಧ್ಯ ರಾತ್ರಿಯಿಂದ ಬಲದಂಡೆ ನಾಲೆಗೆ 1 ಸಾವಿರ ಕ್ಯೂಸೆಕ್ಸ್ ನೀರು ಬಿಡುಗಡೆ ಮಾಡುವಂತೆ ಸೂಚಿಸಿದ್ದಾರೆ.



# ಶೇ.2ರ ಒಳ ಮೀಸಲಾತಿ, ಪಂಚ ಕಸುಬುಗಳಿಗೆ ಉತ್ತೇಜನ

## ವಿಶ್ವಕರ್ಮ ಸಮುದಾಯದ ಸಮಾವೇಶದಲ್ಲಿ ಸರ್ಕಾರಕ್ಕೆ ಒತ್ತಾಯ

ದಾವಣಗೆರೆ, ಜು. 11 - ವಿಶ್ವಕರ್ಮ ಸಮಾಜದ ಪಂಚ ಕಸುಬುಗಳಿಗೆ ಉತ್ತೇಜನ ನೀಡಲು ತರಬೇತಿ ಕೇಂದ್ರಗಳ ಸ್ಥಾಪನೆ, ಸಮುದಾಯ ಭವನ ಹಾಗೂ ವಿದ್ಯಾರ್ಥಿ ಭವನ ಸ್ಥಾಪನೆ ಹಾಗೂ ಹಿಂದುಳಿದ ವರ್ಗ 2ಎ ದಲ್ಲಿ ವಿಶ್ವಕರ್ಮ ಸಮಾಜಕ್ಕೆ ಶೇ.2ರ ಒಳ ಮೀಸಲಾತಿ ನೀಡುವಂತೆ ವಿಶ್ವಕರ್ಮ ಸಮುದಾಯದ ಸಮಾವೇಶದಲ್ಲಿ ಸರ್ಕಾರಕ್ಕೆ ಒತ್ತಾಯಿಸಲಾಗಿದೆ.

ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಅಖಿಲ ಭಾರತ ವಿಶ್ವಕರ್ಮ ಪರಿಷತ್ ಹಾಗೂ ರಾಜ್ಯ ವಿಶ್ವಕರ್ಮ ಸಮಾಜದ ವಿವಿಧ ಸಂಘಗಳ ಸಹಯೋಗದಲ್ಲಿ ಅಖಿಲ ಕರ್ನಾಟಕ ವಿಶ್ವಬ್ರಾಹ್ಮಣ ಪೀಠಾಧಿಪತಿಗಳ ಮತ್ತು ಮಠಾಧಿಪತಿಗಳ ಒಕ್ಕೂಟದ ಸಮ್ಮಿಲನ ಮತ್ತು ವಿಶ್ವಕರ್ಮ ಜನಜಾಗೃತಿ ಸಮಾವೇಶ, ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

ನಗರದಲ್ಲಿ ವಿಶ್ವಕರ್ಮರ ಪಂಚ ಕಸುಬುಗಳು ಹಾಗೂ ಇತರೆ ಸಮಾಜದ ಕರಕುಶಲ ವಸ್ತುಗಳ ಕೈಗಾರಿಕಾ ತರಬೇತಿ ಕೇಂದ್ರ ಸ್ಥಾಪಿಸಲು 25 ಎಕರೆ ಭೂಮಿಯನ್ನು ಸರ್ಕಾರದಿಂದ ನೀಡಬೇಕು ಎಂದೂ ಸಭೆಯಲ್ಲಿ ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಸಮಾಜದ ಮುಖಂಡರು ಹಾಗೂ ಸ್ವಾಮೀಜಿಗಳು, ವಿಶ್ವಕರ್ಮ ಸಮಾಜ ದೊಡ್ಡದಾಗಿದ್ದರೂ ಅಸಂಘಟಿತವಾಗಿದೆ. ಸಮಾಜವನ್ನು ಸರ್ಕಾರ ಹಾಗೂ ರಾಜಕೀಯ ಪಕ್ಷಗಳು ಕಡೆಗಣಿಸಿವೆ ಎಂದು ವಿಷಾದಿಸಿದರು.

ಈ ಹಿನ್ನೆಲೆಯಲ್ಲಿ ವಿಶ್ವಕರ್ಮ ಸಮಾಜದ ಸ್ವಾಮೀಜಿಗಳ ಒಕ್ಕೂಟ ಸ್ಥಾಪಿಸಲಾಗಿದೆ. ಒಕ್ಕೂಟದ ನೇತೃತ್ವದಲ್ಲಿ ಸರ್ಕಾರದಿಂದ ಪಡೆಯಬೇಕಾದ ಸವಲತ್ತುಗಳು ಹಾಗೂ ನೆರವು ಪಡೆಯಬೇಕು ಎಂದು ಸ್ವಾಮೀಜಿಗಳು ಹಾಗೂ ಮುಖಂಡರು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ವಡ್ಡನಹಾಳ್‌ನ ಸಾವಿತ್ರಿ ಪೀಠದ ಶ್ರೀ ಶಂಕರಾತ್ಮಾನಂದ ಸರಸ್ವತಿ ಸ್ವಾಮೀಜಿ, ವಿಶ್ವಕರ್ಮ ಸಮಾಜ ರಾಜಕೀಯ ಸ್ಥಾನಮಾನದಿಂದ ವಂಚಿತವಾಗಿದೆ. ಪಕ್ಷಗಳು ಹಾಗೂ ಸರ್ಕಾರಗಳು ನಮ್ಮ ಬಗ್ಗೆ ಕಿಂಚಿತ್ತೂ ಚಿಂತಿಸಿಲ್ಲ. ಕೊರೊನಾ ನಂತರ ಬೇರೆ ಸಮುದಾಯಗಳಿಗೆ ನೆರವು ನೀಡಲಾಯಿತಾದರೂ, ವಿಶ್ವಕರ್ಮ ಸಮುದಾಯಕ್ಕೆ ನೆರವು ನೀಡಲಿಲ್ಲ ಎಂದರು.

ಮುಂದಿನ ದಿನಗಳಲ್ಲಿ ಸಮಾಜದ ಎಲ್ಲ ಸಂಘಟನೆಗಳು ಪೀಠಾಧಿಪತಿಗಳ ಹಾಗೂ ಮಠಾಧಿಪತಿಗಳ ಒಕ್ಕೂಟದ ಮೂಲಕವೇ ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದಿಡಬೇಕು ಎಂದು ಶ್ರೀಗಳು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಚಿತ್ರನಟ ವಿಜಯ ರಾಘವೇಂದ್ರ, ವಿಶ್ವಕರ್ಮ ಸಮಾಜದವರು ಒಂದೇ ಕುಟುಂಬದ ರೀತಿಯ ಭಾವನೆ ಹೊಂದಬೇಕು. ಆತ್ಮವಿಶ್ವಾಸ ಹಾಗೂ ನಂಬಿಕೆಯನ್ನು ಸದಾ ಉಳಿಸಿಕೊಳ್ಳಬೇಕು ಎಂದರು.

ಶಾಸಕ ಎಸ್. ರಾಮಪ್ಪ ಮಾತನಾಡಿ, ವಿಶ್ವಕರ್ಮ ಸಮಾಜದ ಮಕ್ಕಳಿಗೆ ಹೆಚ್ಚಿನ ಶಿಕ್ಷಣ ಒದಗಿಸಿ, ಅವರನ್ನೇ ಆಸ್ತಿಯನ್ನಾಗಿ ಮಾಡಬೇಕು ಎಂದರಲ್ಲದೇ, ಹರಿಹರದ ರಸ್ತೆಯೊಂದಕ್ಕೆ ವಿಶ್ವಕರ್ಮರ ಹೆಸರಿಡಲಾಗುವುದು ಎಂದು ತಿಳಿಸಿದರು.

ಅಖಿಲ ಭಾರತ ವಿಶ್ವಕರ್ಮ ಪರಿಷತ್ ರಾಷ್ಟ್ರೀಯ ಅಧ್ಯಕ್ಷ ಹೆಚ್.ವಿ. ಸತೀಶ್ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದ ಸಾನ್ನಿಧ್ಯವನ್ನು ಹಾಸನದ ಅರೆಮಾದನಹಳ್ಳಿಯ ಶ್ರೀ ವಿಭೂಷಿತ ಶಿವಸುಜ್ಞಾನತೀರ್ಥ ಸ್ವಾಮೀಜಿ, ಸಿಂಧಗಿಯ ಮೂರುಝಾವದ ಮಠದ ಶ್ರೀ ರಾಮಚಂದ್ರ ಸ್ವಾಮೀಜಿ, ಮರವಾಳಮಠದ ಶ್ರೀ ಜಗನ್ನಾಥ ಸ್ವಾಮೀಜಿ, ವಿಜಯಪುರದ ಮೂರುಝಾವದ ಮಠದ ಶ್ರೀ ಮಹೇಂದ್ರ ಸ್ವಾಮೀಜಿ, ಕಾಡಲಗೇರಿಯ ಶ್ರೀ ನಾಗಲಿಂಗ ಸ್ವಾಮೀಜಿ, ಸವದತ್ತಿಯ ಶ್ರೀ ಸೋಮಲಿಂಗಯ್ಯ ಸ್ವಾಮೀಜಿ, ಶಹಪೂರದ ಶ್ರೀ ಕಾಳಹಸ್ತೇಂದ್ರ ಸ್ವಾಮೀಜಿ, ಬೆಂಗಳೂರಿನ ಆದಿಲಕ್ಷ್ಮಿ ಸಂಸ್ಥಾನಮಠದ ಶ್ರೀ ನೀಲಕಂಠಾಚಾರ್ಯ ಸ್ವಾಮೀಜಿ, ನಾಲತವಾಡದ ಶ್ರೀ ಪಂಪಾಪತಿ ಸ್ವಾಮೀಜಿ, ಹೊಳೆಆಲೂರಿನ ಶ್ರೀ ಯಚ್ಚರ ಸ್ವಾಮೀಜಿ, ಕಲಬುರ್ಗಿಯ ಶ್ರೀ ಸುರೇಂದ್ರ ಸ್ವಾಮೀಜಿ, ಗದಗಿನಮಠದ ಶ್ರೀ ಮಳಿಯಪ್ಪಯ್ಯ ಸ್ವಾಮೀಜಿ, ಅಫಜಲಪುರದ ಶ್ರೀ ಕುಮಾರ ಸ್ವಾಮೀಜಿ ವಹಿಸಿದ್ದರು.

ವೇದಿಕೆಯ ಮೇಲೆ ಅಖಿಲ ಭಾರತ ವಿಶ್ವಕರ್ಮ ಪರಿಷತ್ ರಾಜ್ಯಾಧ್ಯಕ್ಷ ಆರ್. ಪ್ರಸನ್ನಕುಮಾರ್, ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಾಬು ಪತ್ತಾರ್, ಮಾಜಿ ಸಚಿವ ಹೆಚ್.ಎಂ. ರೇವಣ್ಣ, ಮಾಜಿ ಶಾಸಕರಾದ ಬಿ.ಪಿ. ಹರೀಶ್, ಎಂ.ಡಿ. ಲಕ್ಷ್ಮಿನಾರಾಯಣ ಮತ್ತಿತರರು ಉಪಸ್ಥಿತರಿದ್ದರು.

ವಿಶ್ವಕರ್ಮ ಪರಿಷತ್ ಜಿಲ್ಲಾ ಅಧ್ಯಕ್ಷ ಎಂ.ಇ. ಮೌನೇಶ್ವರಾಚಾರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

### ಸಾಕ್ಷ್ಯ ಚಿತ್ರದಲ್ಲಿ ಕಾಳಿಕಾ ದೇವಿಗೆ ಅವಮಾನ: ಖಂಡನೆ

ಕಾಳಿ ಸಾಕ್ಷ್ಯ ಚಿತ್ರದಲ್ಲಿ ಕಾಳಿಕಾ ದೇವಿಯನ್ನು ವಿಕೃತವಾಗಿ ಚಿತ್ರಿಸಲಾಗಿದೆ ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಪೀಠಾಧಿಪತಿಗಳ ಒಕ್ಕೂಟ ಖಂಡಿಸಿದೆ.

ವಿಶ್ವಕರ್ಮ ಜನಜಾಗೃತಿ ಸಮಾವೇಶದ ಅಂಗವಾಗಿ ಇಲ್ಲಿನ ಜಯದೇವ ವೃತ್ತದಲ್ಲಿ ನಡೆದ ಮೆರವಣಿಗೆಯಲ್ಲಿ 20ಕ್ಕೂ ಹೆಚ್ಚು ಸ್ವಾಮೀಜಿಗಳು ಪಾಲ್ಗೊಂಡು ಒಕ್ಕೊರಲಿನಿಂದ ಆಕ್ರೋಶ ವ್ಯಕ್ತಪಡಿಸಿದರು.

ಕಾಳಿ ದೇವಿಯನ್ನು ಅವಹೇಳನಕಾರಿಯಾಗಿ ಚಿತ್ರಿಸಿರುವುದು ವಿಶ್ವಕರ್ಮ ಸಮಾಜಕ್ಕಷ್ಟೇ ಅಲ್ಲ, ಭಾರತದಾದ್ಯಂತ ದೇವಿ ಆರಾಧಕರಿಗೆ ನೋವು ತಂದಿದೆ ಎಂದವರು ಹೇಳಿದ್ದಾರೆ. ಚಿತ್ರ ಪ್ರದರ್ಶನವನ್ನು ವಾಪಸ್ ತೆಗೆದುಕೊಂಡು ಕ್ಷಮಾಪಣೆ ಕೋರಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ಬೇರೆ ರೂಪ ತಾಳಲಿದೆ ಎಂದು ಅರಕಲಗೂಡು ತಾಲ್ಲೂಕಿನ ಅರೆಮಾದನಹಳ್ಳಿಯ ವಿಶ್ವಕರ್ಮ ಮಹಾಸಂಸ್ಥಾನದ ಶ್ರೀ ಶಿವಸುಜ್ಞಾನ ತೀರ್ಥ ಸ್ವಾಮೀಜಿ ಹೇಳಿದರು. ಕಾಳಿ ಸಾಕ್ಷ್ಯ ಚಿತ್ರ ಪ್ರದರ್ಶನ ತಡೆಯುವಂತೆ ಸಮಾಜದಿಂದ ಪ್ರತಿ ಜಿಲ್ಲೆಯಲ್ಲೂ ಮನವಿ ಮಾಡಲಾಗುವುದು ಎಂದು ವಿಶ್ವಕರ್ಮ ಸಮುದಾಯಗಳ ಅಭಿವೃದ್ದಿ ನಿಗಮದ ಅಧ್ಯಕ್ಷ ಬಾಬು ಪತ್ತಾರ್ ತಿಳಿಸಿದರು.

# ಮನಸ್ಸನ್ನು ಗೆದ್ದರೆ ಜಗತ್ತನ್ನೇ ಗೆದ್ದಂತೆ

## ಪ್ರವಚನದ ಕೊನೆಯ ದಿನದಲ್ಲಿ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ



ದಾವಣಗೆರೆ, ಜು.11- ಮನಸ್ಸನ್ನು ಗೆದ್ದರೆ ಜಗತ್ತನ್ನೇ ಗೆದ್ದಂತೆ ಎಂದು ಜನವಾಡದ ಅಲ್ಲಮಪ್ರಭು ಆಶ್ರಮದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು.

ಶ್ರೀ ಜಯದೇವ ಜಗದ್ಗುರುಗಳವರ 65ನೇ ಸ್ಮರಣೋತ್ಸವ ಶರಣ ಸಂಸ್ಕೃತಿ ಉತ್ಸವದ ಅಂಗವಾಗಿ ನಗರದ ಶಿವಯೋಗಾಶ್ರಮದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಶೇಷ ಪ್ರವಚನದ ಸಮಾರೋಪ ಸಮಾರಂಭದಲ್ಲಿ ಅವರು ಪ್ರವಚನ ನೀಡಿದರು.

ಮನಸ್ಸಿನ ಗುಣ ಚಂಚಲ, ಮನಸ್ಸಿಗೆ ಮಂಗನಂತೆ ಜಿಗಿಯುವ ಸ್ವಭಾವವಿದೆ. ಅದನ್ನು ಧ್ಯಾನ, ಶಿವ ಯೋಗದಿಂದ ಪಳಗಿಸಿದಾಗ ನಮ್ಮ ಕೈವಶವಾಗುತ್ತದೆ ಎಂದರು.

ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ಮಾತನಾಡಿ, ಮಾನವನ ಬದುಕಿನಲ್ಲಿ ಸತ್ ಚಿಂತನೆಗಳು ಬೇಕು. ಸತ್ ಚಿಂತನೆ ಇಲ್ಲದೇ ಹೋದರೆ ಬದುಕು ದುಷ್ಕೃತ್ಯದ ಗೂಡಾಗುತ್ತದೆ ಎಂದು ಹೇಳಿದರು.

ಪ್ರತಿಯೊಬ್ಬ ವ್ಯಕ್ತಿಯಲ್ಲಿ ದುಷ್ಟ ವಿಚಾರಗಳು ಬಂದೇ ಬರುತ್ತವೆ. ವಾಹನದ ಅಪಘಾತ ತಡೆಯಲು ಬ್ರೇಕ್ ಹಾಕುವಂತೆ ದುಷ್ಟ ವಿಚಾರಗಳಿಗೂ ಬ್ರೇಕ್ ಹಾಕಬೇಕು ಎಂದು ಹೇಳಿದರು.

ದುಷ್ಟ ಆಲೋಚನೆಗಳನ್ನು ತಡೆಯಲು ಪ್ರವಚನಗಳು ಬೇಕು. ಪ್ರವಚನದ ನುಡಿಗಳನ್ನು ಅಳವಡಿಸಿಕೊಂಡಾಗ ಬದುಕಿನಲ್ಲಿ ಬರುವ ಆಘಾತಕಾರಿ ಕಾರ್ಯವನ್ನು ತಡೆಯಲು ಸಾಧ್ಯ ಎಂದು ನುಡಿದರು.

ಸತ್ ಚಿಂತನೆಯನ್ನು ಕೇಳುವುದರಿಂದ ವ್ಯಕ್ತಿಯ ಎನರ್ಜಿ ಅಧಿಕವಾಗುತ್ತದೆ. ದುರಾಲೋಚನೆ, ದುಷ್ಟವರ್ತನೆಯ ಮಾನವ ಲೋಕಕಂಟಕನಾಗುತ್ತಾನೆ. ಸತ್ ಚಿಂತನೆ, ಸದ್ವರ್ತನೆಯ ಮಾನವ ಲೋಕೋದ್ಧಾರಕಾಗುತ್ತಾನೆ ಎಂದರು.

ಪ್ರವಚನಗಳು, ಬಸವಾದಿ ಶರಣರ ವಚನಗಳು ಮಾನವನ ದುರ್ಬುದ್ದಿ ಕಳೆದು ಸದ್ಬುದ್ದಿಯನ್ನು ನೀಡಿ ಬದುಕನ್ನು ಸಮೃದ್ಧಿಯನ್ನಾಗಿ ಮಾಡುತ್ತವೆ ಎಂದು ಶ್ರೀಗಳು ಹೇಳಿದರು.

ಎಂ.ಜಯಕುಮಾರ್, ಅಂದನೂರು ಮುಪ್ಪಣ್ಣ, ಎಸ್. ಓಂಕಾರಪ್ಪ, ವೀರೇಂದ್ರ, ಲಂಬಿ ಮುರುಗೇಶಪ್ಪ, ಕಣಕುಪ್ಪಿ ಮುರುಗೇಶಪ್ಪ, ಹಾಸಬಾವಿ ಕರಿಬಸಪ್ಪ, ಕುಂಟೋಜಿ ಚನ್ನಪ್ಪ, ವಿಭೂತಿ ಬಸವಾನಂದರು ಇದ್ದರು.

# ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿಯಾಗಿ ಪಳನಿಸ್ವಾಮಿ



**ಘರ್ಷಣೆಯ ನಂತರ ಪನ್ನೀರ್ ಸೆಲ್ವಂ ಹುದ್ದೆಗೆ ಕೊಕ್; ಪಕ್ಷದ ಕಚೇರಿಗೆ ಬೀಗ**

ಚೆನ್ನೈ, ಜು. 11 – ಎಐಎಡಿಎಂಕೆ ನಾಯಕ ಕೆ. ಪಳನಿಸ್ವಾಮಿ ಅವರನ್ನು ಪಕ್ಷದ ಹಂಗಾಮಿ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ಅವರಿಗೆ ಸಂಘಟನೆಯ ಪೂರ್ಣ ಅಧಿಕಾರ ನೀಡಲಾಗಿದೆ. ಅವರ ಪ್ರತಿಸ್ಪರ್ಧಿಯಾಗಿದ್ದ ಒ. ಪನ್ನೀರ್‌ಸೆಲ್ವಂ ಹಾಗೂ ಅವರ ಬೆಂಬಲಿಗರ ಬಳಿ ಇದ್ದ ಹುದ್ದೆಗಳನ್ನು ಕಿತ್ತುಕೊಳ್ಳಲಾಗಿದೆ.

ಪನ್ನೀರ್‌ಸೆಲ್ವಂ ಸ್ವಾರ್ಥಿ ಎಂದು ತರಾಟೆಗೆ ತೆಗೆದುಕೊಂಡಿರುವ ಪಳನಿಸ್ವಾಮಿ, ಆಡಳಿತಾರೂಢ ಡಿಎಂಕೆ ಜೊತೆ ಸೇರಿಕೊಂಡು ಎಐಎಡಿಎಂಕೆ ಪಕ್ಷದ ಕಚೇರಿ ಮೇಲೆ ದಾಳಿ ನಡೆಸಿದ್ದಾರೆ ಎಂದು ಆರೋಪಿಸಿದ್ದಾರೆ.

ಆರೋಪ ತಳ್ಳಿ ಹಾಕಿರುವ ಡಿಎಂಕೆ, ಪ್ರತಿಪಕ್ಷದಲ್ಲಿ ನಡೆಯುತ್ತಿರುವ ಘಟನೆಗಳಿಗೂ ತನಗೂ ಸಂಬಂಧ ಇಲ್ಲ ಎಂದು ಹೇಳಿದೆ.

ಎಐಎಡಿಎಂಕೆಯ ಕಾರ್ಯಕಾರಿಣಿ ಸಭೆಯಲ್ಲಿ ಪನ್ನೀರ್‌ಸೆಲ್ವಂ ಬಳಿ ಇದ್ದ ಹುದ್ದೆಗಳನ್ನು ರದ್ದುಗೊಳಿಸಲು ನಿರ್ಧರಿಸಲಾಗಿದೆ.

ನಾಲ್ಕು ತಿಂಗಳಲ್ಲಿ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಚುನಾವಣೆ ನಡೆಸಲು ಪಕ್ಷ ತೀರ್ಮಾನಿಸಿದೆ. ಇದಕ್ಕಾಗಿ ಪಕ್ಷದ ಹಲವಾರು ನಿಯಮಗಳಲ್ಲಿ ಬದಲಾವಣೆ ತರಲಾಗಿದೆ. ಈ ನಡುವೆ, ಪನ್ನೀರ್‌ಸೆಲ್ವಂ ಹಾಗೂ ಪಳನಿಸ್ವಾಮಿ ಬೆಂಬಲಿಗರು ಎಐಎಡಿಎಂಕೆ ಕೇಂದ್ರ ಕಚೇರಿಯಲ್ಲಿ ಗದ್ದಲ ನಡೆಸಿದ್ದಾರೆ. ಗದ್ದಲದ ನಂತರ ರಾಜ್ಯ ಸರ್ಕಾರ ಕೇಂದ್ರ ಕಚೇರಿಗೆ ಬೀಗ ಮುದ್ರೆ ಹಾಕಿದೆ.

# ಯೂನಿಯನ್ ಬ್ಯಾಂಕಿಗೆ ಬೀಗ ಹಾಕುವ ಪ್ರಯತ್ನ: ಬಂಧನ



**ಮಾಕನೂರಿನಲ್ಲಿ ರೈತರ ಪ್ರತಿಭಟನೆ**

ರಾಣೇಬೆನ್ನೂರು, ಜು. 11- ತಮಗೆ ಆಗಿರುವ ಅನ್ಯಾಯವನ್ನು ಪ್ರತಿಭಟಿಸಿ ಯೂನಿಯನ್ ಬ್ಯಾಂಕಿಗೆ ಬೀಗ ಹಾಕಿ ಅರೆಬೆತ್ತಲೆಯಾಗಿ ಶಿಗ್ಗಾಂವಿಯಲ್ಲಿನ ಮುಖ್ಯಮಂತ್ರಿಗಳ ಮನೆವರೆಗೆ ಪಾದಯಾತ್ರೆ ನಡೆಸಲು ಯತ್ನಿಸಿದ ರೈತರನ್ನು ಬಂಧಿಸಿದ ಘಟನೆ ತಾಲ್ಲೂಕಿನ ಮಾಕನೂರ ಗ್ರಾಮದಲ್ಲಿಂದು ನಡೆಯಿತು. ಒಂದೇ ಕಂತಿನಲ್ಲಿ ಸಾಲ ತುಂಬಿಸಿಕೊಂಡು ಅವರನ್ನು ಋಣಮುಕ್ತರನ್ನಾಗಿಸುವ ಸರ್ಕಾರದ ಒಟಿಎಸ್ ಯೋಜನೆಯನ್ವಯ ನಮ್ಮ ಸಾಲ ಕಟ್ಟಿಸಿಕೊಳ್ಳುವಂತೆ ಒತ್ತಾಯಿಸಿ, ಬ್ಯಾಂಕಿನೆದುರು ಕಳೆದ ಮೂರು ತಿಂಗ ಳಿಂದ ರೈತರು ಪ್ರತಿಭಟನೆ ನಡೆಸಿದ್ದರು.

ರೈತರು, ರಾಜ್ಯಪಾಲರು ಸೇರಿದಂತೆ ಮುಖ್ಯಮಂತ್ರಿ, ಕೃಷಿ ಮಂತ್ರಿ, ಶಾಸಕರಿಗೆ, ಸಂಬಂಧಿಸಿದ ಸಚಿವಾಲಯದ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು. ಸಚಿವರು, ಶಾಸಕರು, ಅಧಿಕಾರಿಗಳು, ರೈತ ಸಂಘಟನೆಗಳ ಅಧ್ಯಕ್ಷರುಗಳು ಸ್ಥಳಕ್ಕೆ ಆಗಮಿಸಿ ರೈತರ ಬೇಡಿಕೆಗಳನ್ನು ಆಲಿಸಿದ್ದರು. ಆದರೆ ಇದುವರೆಗೂ ಯಾರಿಂದಲೂ, ಯಾವುದೇ ಕ್ರಮ ಜರುಗಲಿಲ್ಲ. ಮೊದಲೇ ತಿಳಿಸಿದಂತೆ ರೈತರು ಇಂದು ತಮ್ಮ ಹೋರಾಟಕ್ಕೆ ತೀವ್ರ ಸ್ವರೂಪ ನೀಡಲು ಪ್ರಯತ್ನ ನಡೆಸುತ್ತಲೇ ಪೊಲೀಸರು ರೈತರನ್ನು ಬಂಧಿಸಿದರು.

ಮುಖಂಡರುಗಳಾದ ರವೀಂದ್ರಗೌಡ ಪಾಟೀಲ, ಈರಣ್ಣ ಹಲಗೇರಿ, ಬಸವರಾಜ ಕೊಂಗಿ, ಸುರೇಶ ಮಲ್ಲಾಪೂರ, ಹನುಮಂತಗೌಡ ಮುದೇನೂರ, ರುದ್ರಗೌಡ ಸಣ್ಣಹನುಮಗೌಡ ಸೇರಿದಂತೆ ಮುಷ್ಟೂರು, ಮುದೇನೂರ, ನಾಗೇನಹಳ್ಳಿ, ಮಾಕನೂರಿನ 36 ಕ್ಕೂ ಹೆಚ್ಚು ರೈತರನ್ನು ಬಂಧಿಸಿ ವೈಯಕ್ತಿಕ ಜಾಮೀನು ಪಡೆದು ಬಿಡುಗಡೆ ಮಾಡಿದರು.

# ಕಾಳಿಕಾದೇವಿಗೆ ಅಪಚಾರ : ಖಂಡನೆ

(1ನೇ ಪುಟದಿಂದ) ನಡೆಯುವ ಸಮಾವೇಶದಲ್ಲಿ ವಿಶ್ವಕರ್ಮ ಸಮಾಜದ ಮಠಾಧಿಪತಿಗಳ ಒಕ್ಕೂಟದಿಂದ ಮುಂದಿನ ನಿರ್ಣಯ ಕೈಗೊಳ್ಳಲಾಗುವುದು. ಹಿಂದು ದೇವರುಗಳಿಗೆ ಅಪಚಾರ ಮಾಡಿದರೆ ಖಂಡಿಸಲಾಗುವುದು. ಕಾಳಿಕಾ ದೇವಿಗೆ ಅಪಮಾನ ಮಾಡಿದವರು ಈ ಕೂಡಲೇ ಕ್ಷಮಾಪಣೆ ಕೇಳಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಹೋರಾಟ ನಡೆಸಲಾಗುವುದು. ಸಂಘಟನೆಯ ಶಕ್ತಿ ನಮ್ಮಲ್ಲಿದೆ ಎಂದು ತಿಳಿಸಿದರು.

ನಮ್ಮ ಸಮಾಜದ ಎಲ್ಲಾ ಮಠಾಧೀಶರು ಒಟ್ಟಾಗಿದ್ದೇವೆ. ಪ್ರತ್ಯೇಕ ಮಠದ ಅವಶ್ಯಕತೆ ಇಲ್ಲ. ಪರಂಪರೆಯಿಂದ ಬಂದ ಮಠ ನಮ್ಮದು. ಆದ್ದರಿಂದ ಪ್ರತ್ಯೇಕತೆಯ ಪ್ರಶ್ನೆಯೇ ಇಲ್ಲ ಎಂದರು.

ಈ ವೇಳೆ ರಾಷ್ಟ್ರೀಯ ಅಧ್ಯಕ್ಷ ಹೆಚ್.ವಿ. ಸತೀಶ್‌ಕುಮಾರ್, ಚನ್ನಗಿರಿ ತಾಲ್ಲೂಕು ವಡ್ನಾಳು ಮಠದ ಶ್ರೀ ಅಷ್ಟೋತ್ತರ ಶತಶ್ರೀ ಶಂಕರಾತ್ಮಾನಂದ ಸರಸ್ವತಿ ಮಹಾಸ್ವಾಮೀಜಿ, ಸಿಂಧಗಿ ಶ್ರೀ ರಾಮಚಂದ್ರ ಸ್ವಾಮೀಜಿ, ಮರವಾಳಮಠದ ಶ್ರೀ ಮಹೇಂದ್ರ ಸ್ವಾಮೀಜಿ ಸೇರಿದಂತೆ, ಸಮಾಜದ ವಿವಿಧ ಗುರುಗಳ ಸಾನ್ನಿಧ್ಯದಲ್ಲಿ ವಿಶ್ವಕರ್ಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಾಬು ಪತ್ತಾರ್, ವಿಶ್ವಕರ್ಮ ಸಮಾಜದ ರಾಜ್ಯಾಧ್ಯಕ್ಷ ಆರ್. ಪ್ರಸನ್ನಕುಮಾರ್, ಮಹಾರುದ್ರಾಚಾರ್, ಎಂ.ಎ. ಮೌನೇಶ್ವರಾಚಾರ್, ಸಿ. ನಾರಾಯಣಾಚಾರ್, ಎಂ. ಶಂಕರಮೂರ್ತಿ ಸೇರಿದಂತೆ ಮುಖಂಡರು, ಸಮಾಜ ಬಾಂಧವರು ಇದ್ದರು.

# ಟಿಕೆಟ್ : ನನಗೊಂದು, ಕುಟುಂಬಕ್ಕೊಂದು

### ಪಕ್ಷದ ಎದುರು ಕಾಂಗ್ರೆಸ್‌ನ ಹಲವು ನಾಯಕರ ಬೇಡಿಕೆ

ಬೆಂಗಳೂರು, ಜು. 11- ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ತಮಗೊಂದು, ತಮ್ಮ ಕುಟುಂಬದವರಿಗೊಂದು ಟಿಕೆಟ್ ನೀಡುವಂತೆ ರಾಜ್ಯ ಕಾಂಗ್ರೆಸ್ ಮುಖಂಡರು ಪಕ್ಷದ ನಾಯಕರಲ್ಲಿ ಬೇಡಿಕೆ ಇಟ್ಟಿದ್ದಾರೆ.

ಮಾಜಿ ಸಚಿವ ಆರ್.ವಿ. ದೇಶಪಾಂಡೆ, ಡಾ. ಹೆಚ್.ಸಿ. ಮಹಾದೇವಪ್ಪ, ಸತೀಶ್ ಜಾರಕಿಹೊಳಿ ಸೇರಿದಂತೆ 40ಕ್ಕೂ ಹೆಚ್ಚು ಮುಖಂಡರುಗಳು ತಮಗಲ್ಲದೆ, ತಮ್ಮ ಮಗನಿಗೆ ಇಲ್ಲವೇ ಸೊಸೆಗೆ ಟಿಕೆಟ್ ನೀಡಿ ಎಂದಿದ್ದಾರೆ.

ಬಿಜೆಪಿ ಇಲ್ಲವೇ ಜೆಡಿಎಸ್ ಸತತವಾಗಿ ಗೆಲ್ಲುತ್ತಿರುವ ಕ್ಷೇತ್ರಗಳಲ್ಲಿ ತಮ್ಮ ಕುಟುಂಬ ವರ್ಗದವರನ್ನು ಕಣಕ್ಕಿಳಿಸಿದರೆ ಆ ಕ್ಷೇತ್ರ ಕಾಂಗ್ರೆಸ್ಸಿನದಾಗುತ್ತದೆ.


ನಮ್ಮದಲ್ಲದ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲು ಪಕ್ಷದ ಚಿಹ್ನೆಯ ಜೊತೆಗೆ ನಮ್ಮ ಕುಟುಂಬದ ವರ್ಚಸ್ಸು ಮತ್ತು ಸಂಪರ್ಕವನ್ನು ಬಳಸಿಕೊಂಡು ಗೆಲುವು ತಂದು ಕೊಡುತ್ತೇವೆ ಎಂದು ಪಕ್ಷದ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ರಾಜ್ಯ ಉಸ್ತುವಾರಿ ನೋಡಿಕೊಳ್ಳುತ್ತಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರ ಬಳಿ ಬೇಡಿಕೆ ಇಟ್ಟಿದ್ದಾರೆ.

ಅಧಿಕಾರಕ್ಕೆ ಬರುವ ಕನಸಿನಲ್ಲಿರುವ ಕಾಂಗ್ರೆಸ್ ಪಕ್ಷದಲ್ಲಿ ಟಿಕೆಟ್‌ಗಾಗಿ ಲಾಬಿ ಆರಂಭವಾಗಿದೆ. ಇದರ ಮಧ್ಯೆಯೇ ಪಕ್ಷದ ಮುಖಂಡರು ತಮ್ಮ ಕುಟುಂಬದವರು ಮತ್ತು ತಮ್ಮ ಅನುಯಾಯಿಗಳಿಗೆ ತಮ್ಮ ಕ್ಷೇತ್ರವನ್ನು ಗಟ್ಟಿ ಮಾಡಿಕೊಳ್ಳಲು ಕಸರತ್ತು ಆರಂಭಿಸಿದ್ದಾರೆ.

ಈಗಾಗಲೇ ಪ್ರಸಕ್ತ ವಿಧಾನಸಭೆಯಲ್ಲಿ ನಾಲ್ಕು ಮಂದಿ ಒಂದೇ ಕುಟುಂಬಕ್ಕೆ ಸೇರಿದವರು ಇಬ್ಬರು ಮೂವರು ಸದಸ್ಯರಾಗಿದ್ದಾರೆ.

ಟಿಕೆಟ್ ಕೇಳುವ ಪ್ರಮುಖರಲ್ಲಿ ಮಾಜಿ ಸಚಿವರಾದ ಹೆಚ್.ಸಿ. (5ನೇ ಪುಟಕ್ಕೆ)

# ಐರಣಿ ಹೊಳೆಮಠ ನಗರದ ಶಾಖಾಮಠದಲ್ಲಿಂದು ಗುರು ಪೂರ್ಣಿಮೆ



ಶ್ರೀ ದುರ್ಗಾಂಬಿಕ ದೇವಸ್ಥಾನದ ಹತ್ತಿರವಿರುವ ಐರಣಿ ಹೊಳೆಮಠ ಮಹಾಸಂಸ್ಥಾನ ಶಾಖಾ ಮಠದಲ್ಲಿ ಇಂದು ಮತ್ತು ನಾಳೆ ಗುರು ಪೂರ್ಣಿಮೆ ಹಾಗೂ ಶಾಖಾ ಮಠದ 15 ನೇ ವಾರ್ಷಿಕೋತ್ಸವ ನಡೆಯಲಿದೆ.

ಇಂದು ಮತ್ತು ನಾಳೆ ಸತ್ಸಂಗ, ಭಜನೆ, ಪ್ರವಚನ ಕಾರ್ಯಕ್ರಮಗಳು ಜರುಗುವವು. ಶ್ರೀ ಸದ್ಗುರು ಬಸವರಾಜ ದೇಶಿಕೇಂದ್ರ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ವಿನೋಬನಗರ ಶ್ರೀ ಜಡೇ ಸಿದ್ದೇಶ್ವರ ಮಠದ ಶಿವಾನಂದ ಸ್ವಾಮಿಗಳು ಉಪನ್ಯಾಸ ನೀಡಲಿದ್ದಾರೆ.

ನಾಳೆ ಬುಧವಾರ ಅಖಂಡ ಗುರು ಭಜನೆ, ಪಂಚಾಮೃತ ಅಭಿಷೇಕ, ಕೈಲಾಸ ಮಹಾಪೂಜೋತ್ಸವ ದರ್ಶನ, ಮಹಾಮಂಗಳಾರತಿ, ಮಹಾಪ್ರಸಾದ ನಡೆಯಲಿದೆ. ರಾಣೇಬೆನ್ನೂರು ತಾಲ್ಲೂಕು ನಾಗೇನಹಳ್ಳಿ ಗ್ರಾಮದ ಭಜನಾ ಮಂಡಳಿಯವರು ಅಖಂಡ ಭಜನೆ ನಡೆಸಿಕೊಡಲಿದ್ದಾರೆ.

# ಜಿಲ್ಲೆಗೆ ನೂತನ ಡಿಸಿ ಶಿವಾನಂದ

(1ನೇ ಪುಟದಿಂದ) ಮೈಸೂರು ಜಿಲ್ಲೆಗಳ ಅಪರ ಜಿಲ್ಲಾಧಿಕಾರಿಗಳಾಗಿದ್ದರು. ಹಾಲಿ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಶಿವಾನಂದ ಕಾಪಶಿ ಅವರನ್ನು ಸರ್ಕಾರ ಇದೇ ಪ್ರಥಮ ಬಾರಿಗೆ ಜಿಲ್ಲಾಧಿಕಾರಿಯನ್ನಾಗಿ ದಾವಣಗೆರೆಗೆ ನೇಮಕ ಮಾಡಿದೆ.

**ವರ್ಗಾವರ್ಗಿ :** ಅಮ್ಲನ್ ಆದಿತ್ಯ ಬಿಸ್ವಾಸ್ ಅವರನ್ನು ಬೆಂಗಳೂರು ವಿಭಾಗೀಯ ಆಯುಕ್ತರಾಗಿ ವರ್ಗಾಯಿಸಲಾಗಿದೆ.

ಕ್ಯಾಪ್ಟನ್ ಡಾ. ಕೆ. ರಾಜೇಂದ್ರ ಅವರನ್ನು ಸಹಕಾರ ಸೊಸೈಟಿಗಳ ರಿಜಿಸ್ಟ್ರಾರ್ ಆಗಿ ನೇಮಿಸಲಾಗಿದೆ. ಎಂ. ಸುಂದರೇಶಬಾಬು ಅವರನ್ನು ಬೆಂಗಳೂರು ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕರಾಗಿ ನೇಮಿಸಲಾಗಿದೆ. ಸುರಲ್ಕರ್ ವಿಕಾಸ್ ಕಿಶೋರ್ ಅವರನ್ನು ಲೋಕಸೇವಾ ಆಯೋಗದ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ಹೊನ್ನಂಬ ಅವರನ್ನು ಗದಗ ಜಿಲ್ಲಾಧಿಕಾರಿಯಾಗಿ ನೇಮಿಸಲಾಗಿದೆ. ಆರ್. ಲತ ಅವರನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಯಾಗಿ ನೇಮಿಸಲಾಗಿದೆ. ಲೋಖಂಡೆ ಸ್ನೇಹಲ್ ಸುಧಾಕರ್ ಅವರನ್ನು ಉನ್ನತ ಶಿಕ್ಷಣ ಇಲಾಖೆಯ ಉಪ ಕಾರ್ಯದರ್ಶಿಯಾಗಿ ನೇಮಿಸಿ ಸರ್ಕಾರದ ಅಧೀನ ಕಾರ್ಯದರ್ಶಿ ಎಸ್.ಪಿ. ನಾಗಪ್ಪ ಅವರು ಆದೇಶ ಹೊರಡಿಸಿದ್ದಾರೆ.


**ಪವರ್ ಯೋಗ ಶಿಬಿರ**

3 ರಿಂದ 5 ಕೆ.ಜಿ. ತೂಕ ಕಡಿಮೆ ಮಾಡಿಕೊಳ್ಳಿ

ದಿನಾಂಕ : 14.7.2022 ರಿಂದ 14.08.2022ರವರೆಗೆ

ಸಮಯ : ಬೆಳಗ್ಗೆ 6.00 ರಿಂದ 7.00ರವರೆಗೆ

ವಿಶೇಷವಾಗಿ ಸೂರ್ಯ ನಮಸ್ಕಾರ, ಯೋಗಾಸನ, ಪವರ್ ಯೋಗ, ಬೆಲ್ಟ್ ಯೋಗ, ಸ್ಟಿಕ್ ಯೋಗ, ಧ್ಯಾನ ಮತ್ತು ವಿಶೇಷವಾದ ಶವಾಸನ, ತ್ರಾಟಕ ಧ್ಯಾನದ ಮೂಲಕ ಮಾನಸಿಕ ನೆಮ್ಮದಿ ಅನುಭವಿಸಿ.

ವಿಶೇಷ ರಿಯಾಯಿತಿ ~~1000/-~~ 600/-

ಸ್ಥಳ :

ದಿವ್ಯ ಯೋಗ ಮಂದಿರ


ನಂ. 3632, 8ನೇ ಮೇನ್, 7ನೇ ಕ್ರಾಸ್, ಪಿ.ಜಿ. ಮೆಡಿಕಲ್ ಹಾಸ್ಟೆಲ್ ಎದುರು, ಮೆಡಿಕಲ್ ಹಾಸ್ಟೆಲ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.

ಇಂದೇ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ

ಮೊ : 99726 00713, 81924 70642



**ಲೇಚರ್ ಆ್ಯಂಟೆನಾ ಮೂಲಕ**



ನಿಮ್ಮ ಶರೀರದ ಸಮಸ್ಯೆ, ಮಾನಸಿಕ ಸಮಸ್ಯೆ, ಕುಟುಂಬದ ಸಮಸ್ಯೆ ಮತ್ತು ಮಕ್ಕಳ ಮದುವೆ ವಿಚಾರ, ವ್ಯವಹಾರಿಕ ಸಮಸ್ಯೆಗಳಿಗೆ ಕಾರಣ ಮತ್ತು ಪರಿಹಾರ ತಿಳಿದುಕೊಳ್ಳಲು

ಸಂಪರ್ಕಿಸಿ :

ಸಂದರ್ಶನ ಸಮಯ : ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 3.00 ಗಂಟೆವರೆಗೆ ಮಾತ್ರ

ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.

ಮೊ : 94827 31081



**ಶ್ರೀ ವೆಂಕಟೇಶ್ವರ ವಿದ್ಯಾಸಂಸ್ಥೆ SC (ರಿ).**

ಪುಣಭಘಟ್ಟ, ಹರಪನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ

**ಪತ್ರಿಕಾ ಪ್ರಕಟಣೆ**

ಈ ಸಂಸ್ಥೆಯ ಅಡಿಯಲ್ಲಿ ನಡೆಸುತ್ತಿರುವ ಶ್ರೀ ದುರ್ಗಾಂಬಿಕಾ ಪ್ರೌಢಶಾಲೆ, ಚಿಕ್ಕಮೇಗಳಗೆರೆ, ಹರಪನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ, ಈ ಶಾಲೆಯಲ್ಲಿ ವಿಜ್ಞಾನ ಸಹ-ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ ಹೆಚ್.ಬಿ. ರಮೇಶ್, ಇವರನ್ನು ಇವರ ಹಲವಾರು ಬಾರಿ ಅನಧಿಕೃತ ಗೈರು ಹಾಜರಿ ; ಸೇವೆಯಿಂದ ಅಮಾನತ್ತು ಹಾಗೂ ಇತ್ತೀಚೆಗೆ ದಿನಾಂಕ : 02.02.2022 ರಿಂದ ದಿನಾಂಕ : 30.06.2022ರ ವರೆಗೆ 149 ದಿನಗಳ ಸುದೀರ್ಘ ಅನಧಿಕೃತ ಗೈರು ಹಾಜರಾಗಿದ್ದು, ಈ ಕುರಿತು 3-4 ಬಾರಿ ನೋಟೀಸ್‌ಗಳನ್ನು ಅಂಚೆ ಮೂಲಕ ಜಾರಿ ಮಾಡಿದ್ದರೂ ಸ್ವೀಕರಿಸದೇ ತಿರಸ್ಕರಿಸಿದ್ದು, ಹೀಗಾಗಿ ಶೈಕ್ಷಣಿಕ ವರ್ಷದ ಆರಂಭದ ಹಿನ್ನೆಲೆಯಲ್ಲಿ ಹಾಗೂ ಈ ಶಾಲಾ ವಿದ್ಯಾರ್ಥಿಗಳ ಪಾಠ, ಪ್ರವಚನಗಳಿಗೆ ಇವರ ಅನಧಿಕೃತ ಗೈರು ಹಾಜರಿಯಿಂದ ತೊಂದರೆಯಾಗಿದ್ದು, ಕಾರಣ ಸದರಿ ಮೇಲ್ಕಂಡ ಸಂಸ್ಥೆಯ ಆಡಳಿತ ಮಂಡಳಿಯವರು ಸರ್ವಾನುಮತದ ನಿರ್ಣಯದ ನಡುವಳಿಯ ಅನ್ವಯವಾಗಿ ಶ್ರೀಮತಿ ಕೆ.ಎಸ್. ಉಷಾ, ಅಧ್ಯಕ್ಷರು, ಶ್ರೀ ವೆಂಕಟೇಶ್ವರ ವಿದ್ಯಾಸಂಸ್ಥೆ ಪ.ಜಾ. (ರಿ), ಪುಣಭಘಟ್ಟ, ಆಡಳಿತ ಕಛೇರಿ, ಆಂಜನೇಯ ಬಡಾವಣೆ, ದಾವಣಗೆರೆ-577 004. ಆದ ನಾನು ಶಿಕ್ಷಣ ಕಾನೂನು 1983ರ ಅಧ್ಯಾಯ-IIIರ ನಿಯಮ 14ರ ಉಪ-ನಿಯಮ (X)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ : 01.07.2022 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಸದರಿ ವಿಜ್ಞಾನ ಸಹ-ಶಿಕ್ಷಕನನ್ನು ಸೇವೆಯಿಂದ ವಜಾ ಮಾಡಿ ಆದೇಶಿಸಲಾಗಿದೆ.

ಸದರಿ ಮೇಲ್ಕಂಡ ಆದೇಶದ ಪ್ರತಿಯನ್ನು ನೋಂದಾಯಿತ ಅಂಚೆ-ಸ್ವೀಕೃತಿ ಬಾಕಿಯೊಂದಿಗೆ ಶ್ರೀ ಹೆಚ್.ಬಿ. ರಮೇಶ್, ಸೇವೆಯಿಂದ ವಜಾಗೊಂಡ ಸಹ-ಶಿಕ್ಷಕನಾದ ಇವರಿಗೆ ಕಳುಹಿಸಿದ್ದು, ಒಂದು ವೇಳೆ ಇವರು ಈ ಆದೇಶವನ್ನು ಸ್ವೀಕರಿಸದೇ ತಿರಸ್ಕರಿಸಿದಲ್ಲಿ ಈ ಪತ್ರಿಕಾ ಪ್ರಕಟಣೆ ಆಧಾರಿತವಾಗಿ ಇವರನ್ನು ಸೇವೆಯಿಂದ ವಜಾ ಮಾಡಲಾಗಿದೆ ಎಂದು ತಿಳಿಯತಕ್ಕದ್ದು.

ಸಹಿ/-
ಅಧ್ಯಕ್ಷರು/ಕಾರ್ಯದರ್ಶಿ



**UDAYSHIVAKUMAR INFRA PVT. LTD.**

Banashankari Badavane, Behind Swamy Vivekanand School, Near NH-4 Bypass, Davangere

**APPOINTMENTS**

1) **Accounts Officer:** B.Com/M.com with more than 5 years' experience in company accounting, knowledge of Tally ERP9 prime, TDS & GST– CA Inter is preferable.
2) **Accountant:** B.Com with minimum 3 years' experience in accounting, knowledge of Tally ERP9 prime, TDS & GST.
3) **Recovery Staff:** With more than 2 years' experience in debt collection for Davanagere, Chitradurga, Shimogga and Haveri.

Please send your resume to email:
udayshivakumar.infra@gmail.com



**ಶ್ರೀ ಅಕ್ಕಮಹಾದೇವಿ ಸಮಾಜ (ರಿ)**

ಶ್ರೀ ಅಕ್ಕಮಹಾದೇವಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

**ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ**

ಶ್ರೀ ಅಕ್ಕಮಹಾದೇವಿ ಸಮಾಜದ ವತಿಯಿಂದ 2021-22ನೇ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ, ಅನುದಾನಿತ, ಅನುದಾನ ರಹಿತ ಪ್ರೌಢಶಾಲೆಯಲ್ಲಿ ಮತ್ತು ಪದವಿ ಪೂರ್ವ ಕಾಲೇಜಿನಲ್ಲಿ ದಾವಣಗೆರೆ ನಗರದ ವಿದ್ಯಾರ್ಥಿಗಳು 95% ಕ್ಕಿಂತ ಅಧಿಕ ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಆರ್ಥಿಕವಾಗಿ ಹಿಂದುಳಿದ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕೆ ಉನ್ನತ ಶಿಕ್ಷಣ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಪ್ರಮಾಣ ಪತ್ರ ಕೊಟ್ಟು ಪುರಸ್ಕರಿಸಲಾಗುವುದು. ಅರ್ಹ ವಿದ್ಯಾರ್ಥಿಗಳು ಅಂಕಪಟ್ಟಿ, ಶಾಲಾ ಕಾಲೇಜಿನಿಂದ ದೃಢೀಕರಿಸಿದ ಅರ್ಜಿಯನ್ನು ದಿನಾಂಕ 18.7.2022ರೊಳಗೆ ಸಲ್ಲಿಸತಕ್ಕದ್ದು. ಅರ್ಜಿಯಲ್ಲಿ ಮೊಬೈಲ್ ನಂ. ನಮೂದಿಸುವುದು ಕಡ್ಡಾಯ.

ಆಡಳಿತ ಮಂಡಳಿ
ಶ್ರೀ ಅಕ್ಕಮಹಾದೇವಿ ಸಮಾಜ (ರಿ.), ದಾವಣಗೆರೆ

# ನಗರದಲ್ಲಿ ಶ್ರೀ ಸಂತ ಜ್ಞಾನೇಶ್ವರಿ ಪಾರಾಯಣ



ದಾವಣಗೆರೆ, ಜು. 11 - ಶ್ರೀ ಸಂತ ಜ್ಞಾನೇಶ್ವರಿ ಮಹಾರಾಜರ ಪಾಲಕಿ ಶ್ರೀ ಕ್ಷೇತ್ರ ಪಂಢರಾಪುರಕ್ಕೆ 18 ದಿನದಲ್ಲಿ ಲಕ್ಷಾಂತರ ವಾರಕರಿ ಪಾದಯಾತ್ರೆ ಮೂಲಕ ತಲುಪುತ್ತಾರೆ. ಈ ಹಿನ್ನೆಲೆಯಲ್ಲಿ ಮಹಾರಾಜ ಪೇಟೆಯ ಶ್ರೀ ವಿಠಲ ಮಂದಿರದಲ್ಲಿ ಭಾವಸಾರ ಕ್ಷತ್ರಿಯ ಭಜನಾ ಮಂಡಳಿ ವತಿಯಿಂದ ಅಭಿಷೇಕ, ಕಾಕಡಾರತಿ ಭಜನೆ ಶ್ರೀ ಸಂತ ಜ್ಞಾನೇಶ್ವರಿ ಪಾರಾಯಣ (ಭಗವದ್ಗೀತೆ ಪಟ್ಟಣ) ಹರಿ ಪಾಠ ರಾತ್ರಿ ಕೀರ್ತನೆ ಕಾರ್ಯಕ್ರಮಗಳು ನಿನ್ನೆ ನಡೆದವು.

ಇಂದಿನಿಂದ ಚಾತುರ್ಯ ಮಾಸ ಆರಂಭವಾಗಿದೆ ಎಂದು ಪಂಡರಪುರದ ವಾರಕರಿ ಶ್ರೀ ಹ.ಭ.ಪ ಚಂದ್ರಕಾಂತ್ ವಾದೋನಿ ತಿಳಿಸಿದ್ದಾರೆ.

# ಸ.ಪ್ರ.ದ. ಕಾಲೇಜು ಪದವಿ ಪ್ರವೇಶಾತಿಗೆ ಆನ್‌ಲೈನ್ ಅರ್ಜಿ

ದಾವಣಗೆರೆ, ಜು. 11- ಪ್ರಸಕ್ತ ಶೈಕ್ಷಣಿಕ ಶೈಕ್ಷಣಿಕ ಸಾಲಿನ ದಾವಣಗೆರೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಬಿ.ಎ, ಬಿ.ಕಾಂ, ಬಿ.ಎಸ್ಸಿ, ಮತ್ತು ಬಿ.ಬಿ.ಎ ಪದವಿ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆಯಲು ಇಚ್ಚಿಸುವ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ: ebsite : https://gfge.kar.nic.in/davanagere/Contact-Us ಹಾಗೂ Application Link: https://uucms.karnataka.gov.in/Login/OnlineStudentRegistration-Form ಮೊಬೈಲ್ ಸಂಖ್ಯೆ: 9880812672 ಯನ್ನು ಸಂಪರ್ಕಿಸಬಹು ದೆಂದು ಪ್ರಾಂಶುಪಾಲ ಡಾ. ಅಂಜನಪ್ಪ ಎಸ್.ಆರ್. ತಿಳಿಸಿದ್ದಾರೆ.


## ಶ್ರೀ ಮುರುಘೇಂದ್ರ ಶಿವಯೋಗಿಗಳವರ ಲಿಂಗೈಕ್ಯ ಶತಮಾನೋತ್ಸವ

# ಭಕ್ತರ ಬಾಳು ಬೆಳಗಿದ ಅಥಣಿ ಶಿವಯೋಗಿಗಳು

ಮಠ ಪರಂಪರೆಗೆ ಅಂಟಿದ ಜಾತಿಯ ಸೂತಕ ಕಳೆದ, ಪೀಠಕ್ಕೆ ಅಂಟಿದ ರಕ್ತ ಸಂಬಂಧದ ಕಲೆ ತೊಳೆದು, ಭಕ್ತರೇ ಮಠದ ದಿಕ್ಕು, ಹಕ್ಕು ಎಂದು ಸಾಕ್ಷೀಕರಿಸಿದ ಅಥಣಿ ಶ್ರೀ ಮುರುಘೇಂದ್ರ ಶಿವಯೋಗಿಗಳ ಸ್ಮರಣೋತ್ಸವ, ರಥೋತ್ಸವ ಏ.22ರಂದು ಆರಂಭವಾಗಲಿದ್ದು, ಐದು ದಿನಗಳ ಕಾಲ ಜರುಗಲಿದೆ.

ಜ್ಞಾನದ ಪ್ರಖರತೆ, ಅನುಭಾವದ ಸಾಂದ್ರತೆ, ಅಧ್ಯಾತ್ಮದ ಗೌರೀಶಂಕರವಾಗಿರುವ ಶ್ರೀಗಳು ಕರ್ನಾಟಕದ ಸಾಂಸ್ಕೃತಿಕ, ಧಾರ್ಮಿಕ ಕ್ಷೇತ್ರದಲ್ಲಿ, ಶಿವಯೋಗದಲ್ಲಿ ತಮ್ಮದೇ ಛಾಪು ಮೂಡಿಸಿ ಸಾಧನೆಗೈದಿದ್ದಾರೆ. ಮಠದ ಅಧಿಕಾರ ವಹಿಸಿಕೊಳ್ಳದೇ ಬಸವ ತತ್ವ ಪ್ರಚಾರದಲ್ಲಿ ತೊಡಗಿಕೊಂಡ ಶ್ರೀಗಳು ನುಡಿದಂತೆ ನಡೆದರು.

1836ರಲ್ಲಿ ರಾಚಯ್ಯ-ನೀಲಮ್ಮ ಎಂಬ ಶರಣ ದಂಪತಿ ಮಗನಾಗಿ, ಕೃಷ್ಣಾನದಿ ದಡದ ಇಂಗಳಗಾಂವಿಯಲ್ಲಿ ಜನಿಸಿದ ಅವರಿಗೆ ಗುರುಲಿಂಗಯ್ಯ ಎಂದು ಹೆಸರಿಟ್ಟಿದ್ದರು. ಮಗುವಿನಲ್ಲಿದ್ದ ಯೋಗಿ ಕಳೆ, ಗಂಭೀರ, ಧೀರ ನಿಲುವು, ಉಳಿದ ಮಕ್ಕಳಿಗಿಂತ ಭಿನ್ನವಾಗಿ ಕಾಣುವ ಚೆಲುವು ಹೆತ್ತವರನ್ನು ಗಚ್ಚಿನ ಮಠದ ಮರುಳಶಂಕರ ಸ್ವಾಮೀಜಿಗೆ ಮಗನನ್ನು ಅರ್ಪಿಸಲು ಪ್ರೇರೇಪಿಸಿತು.



1841ರಲ್ಲಿ ಗಚ್ಚಿನ ಮಠ ಸೇರಿ ಮರುಳಶಂಕರ ಶ್ರೀಗಳ ಬಳಿ ಆಡಿ ಬೆಳೆದ ಗುರುಲಿಂಗಯ್ಯ 16ನೇ ವಯಸ್ಸಿನಲ್ಲಿ ಗುರು ಶಾಂತ ಶ್ರೀಗಳಿಂದ ದೀಕ್ಷೆ ಪಡೆ ದರು. ತೆಲಸಂಗದ ಶಿವಬಸವ ದೇವರಿಂದ ವಿದ್ಯಾಭ್ಯಾಸ, ಮಮದಾಪುರ ಶ್ರೀಗಳಿಂದ ವಚನ ಶಾಸ್ತ್ರಾಧ್ಯಯನ, ಗುರುಶಾಂತ ಅಪ್ಪಗಳಿಂದ ಷಟ್‌ಸ್ಥಲ ಬ್ರಹ್ಮೋಪದೇಶ ಪಡೆದು ಮುರುಘೇಶ ಎಂದು ನಾಮಕರಣಗೊಂಡರು. ಹಣವನ್ನು ಚೇಳೆಂದು ಭಾವಿಸಿದ್ದ, ಎಂದಿಗೂ ಪೀಠ ಬಯಸದ ಶ್ರೀಗಳು ಕಾಯಕ ನಿಷ್ಠರಾಗಿ ಬಸವಣ್ಣನಂತೆ ಸರಳ ಜೀವನ ನಡೆಸಿದರು. ಮೈಸೂರು ಓಡೆಯರು, ಶಿರಸಂಗಿ ಲಿಂಗರಾಜರು ಮುಂತಾದ ನಾಡಿನ ಗಣ್ಯರು ಇಲ್ಲಿಗೆ ಭೇಟಿ ನೀಡಿ ಶಿವಯೋಗಿಗಳ, ಮಠದ ದರ್ಶನ ಪಡೆದಿದ್ದಾರೆ. ಧಾರವಾಡದ ಮೃತ್ಯುಂಜಯ ಅಪ್ಪನವರು ಅಥಣಿ ಕಾಶಿಗಿಂತ ಬಲು ಭೇಷ್ ಎಂದಿದ್ದಾರೆ.

ಮುರುಘೇಂದ್ರ ಶಿವಯೋಗಿಗಳು ನಾಡು ಸುತ್ತಿ ಗುಹೇಶ್ವರ ಗುಡ್ಡದಲ್ಲಿ ತಪಸ್ಸು ಮಾಡಿ, ಅನೇಕ ಪವಾಡಗಳ ಮೂಲಕ ಭಕ್ತರ ಮನಸ್ಸು ಗೆದ್ದಿದ್ದರು. ಗಚ್ಚಿನ ಮಠದ ಎಂಟನೇ ಪೀಠಾಧ್ಯಕ್ಷ ರಾಗಿದ್ದ ಎರಡನೇ ಶ್ರೀ ಚನ್ನಬಸವ ಸ್ವಾಮೀಜಿಗೆ ವಯಸ್ಸಾಗಿ ದ್ದರಿಂದ ಮಠದ ಪೀಠವೆಂಬುದು ಕಾಟದಂತೆ ಕಂಡಿತು. ಅದನ್ನು ನಯವಾಗಿ ನಿರಾಕರಿಸಿ, ಭಕ್ತ ಸಮುದಾಯದ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳಿಗೆ ಪಟ್ಟ ಕಟ್ಟುವಂತೆ ಹೇಳಿದ್ದರು. ಪೀಠ ತ್ಯಾಗವೇ ಅವರ ಸಾಧನೆಯಲ್ಲ. ಮಠ ಪರಂಪರೆಗೆ ಅಂಟಿದ ಜಾತಿಯ ಸೂತಕ ಕಳೆದರು. ಪೀಠಕ್ಕೆ ಅಂಟಿಕೊಂಡ ರಕ್ತ ಸಂಬಂಧದ ಕಲೆ ತೊಳೆದು ಭಕ್ತರೇ ಮಠದ ದಿಕ್ಕು, ಹಕ್ಕು ಎಂದು ಸಾಕ್ಷೀಕರಿಸಿದರು. ಅಥಣಿ ಮಠವನ್ನು ಜಗದ್ವಿಖ್ಯಾತಗೊಳಿಸಿದರು. 1915ರಲ್ಲಿ ಲೋಕಮಾನ್ಯ ತಿಲಕರು ಅಥಣಿಗೆ ಬಂದಾಗ ಶ್ರೀಗಳ ದರ್ಶನ ಪಡೆದು, ಭಾರತಕ್ಕೆ ಸ್ವಾತಂತ್ರ್ಯ ಸಿಗುತ್ತದೆ. ಅದನ್ನು ಕಾಣುವ ಭಾಗ್ಯ ನನಗೂ ಇಲ್ಲ, ನಿಮಗೂ ಇಲ್ಲ ಎಂದಿದ್ದ ಶ್ರೀಗಳು 1921ರಲ್ಲಿ ಲಿಂಗೈಕ್ಯರಾದರು.

ಇಂಥ ಶ್ರೀಗಳಿದ್ದ ಮಠಕ್ಕೆ ನಾಡಿನ ವಿವಿಧೆಡೆಯಿಂದ ಅಸಂಖ್ಯಾತ ಭಕ್ತರು ಆಗಮಿಸಿ ದರ್ಶನ ಪಡಯುತ್ತಿದ್ದಾರೆ. ದವನ ಹುಣ್ಣಿಮೆಯಂದು ಶ್ರೀಗಳ ಜಾತ್ರಾ ಮಹೋತ್ಸವ, ರಥೋತ್ಸವ ಐದು ದಿನಗಳ ಕಾಲ ವೈಭವದಿಂದ ನಡೆಯುತ್ತದೆ. ಮಠದಲ್ಲಿ ಶಿವಯೋಗಿಗಳ ಗುರು ಮರುಳಶಂಕರ ಶ್ರೀ ಗದ್ದುಗೆ, ಶಿವಯೋಗಿಗಳ ಸಮಕಾಲೀನ, 6ನೇ ಮಠಾಧೀಶ ಸಿದ್ಧಲಿಂಗ ಶ್ರೀಗಳ ಕರ್ತೃ ಗದ್ದುಗೆಗಳು ಇವೆ. ಇಂದಿಗೂ ತ್ರಿಕಾಲದಲ್ಲಿ ಪೂಜೆ ನಡೆಯುತ್ತದೆ.

**ಮಹಾತಪಸ್ಸಿನ ಶಕ್ತಿಯಿಂದ ಪವಾಡ ಮಾಡಿ ಭಕ್ತರ ಮನ-ಮನೆಗಳಲ್ಲಿ ನೆಲೆಸಿರುವ, ಪೀಠ ನಿರಾಕರಿಸಿ ಮಠ ಪರಂಪರೆಗೆ ಅಂಟಿದ ಜಾತಿಯ ಸೂತಕ ಕಳೆದು ಭಕ್ತರೇ ಮಠದ ದಿಕ್ಕು, ಹಕ್ಕು ಎಂದು ಸಾಕ್ಷೀಕರಿಸಿದ್ದ ಅಥಣಿ ಗಚ್ಚಿನ ಮಠದ ಜಂಗಮ ಜ್ಯೋತಿ ಶ್ರೀ ಮುರುಘೇಂದ್ರ ಶಿವಯೋಗಿಗಳ 100ನೇ ಜಾತ್ರೆ ನಿಮಿತ್ತ ಈ ಲೇಖನ.**

**-ಜೆ. ಸೋಮನಾಥ್**, ದಾವಣಗೆರೆ.

# ಅಲೋಕ್‌ಕುಮಾರ್ ಅವರಿಗೆ ಸನ್ಮಾನ



ದಾವಣಗೆರೆ, ಜು.11- ದಾವಣಗೆರೆ ಜಿಲ್ಲೆಯಾಗಿ ಹೊಸತನದಲ್ಲಿ ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದ ಸಂದರ್ಭದಲ್ಲಿ ಜಿಲ್ಲಾ ರಕ್ಷಣಾಧಿಕಾರಿಯಾಗಿ ಆಗಮಿಸಿ, ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಇಡೀ ಜಿಲ್ಲೆಗೇ ಕಾನೂನಿನ ಬಗ್ಗೆ ಹೊಸ ಚೈತನ್ಯ ನೀಡಿ ಮನೆ ಮಾತಾಗಿದ್ದ ರಾಜ್ಯ ಕಾನೂನು ಮತ್ತು ಸುವ್ಯವಸ್ಥೆ ಎಡಿಜಿಪಿ ಅಲೋಕ್‌ಕುಮಾರ್ ಅವರು ನಗರಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ವಿವಿಧ ಸಂಘ-ಸಂಸ್ಥೆಗಳ ಮುಖಂಡರುಗಳು ಸನ್ಮಾನಿಸಿ, ಗೌರವಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಶೋಷಿತ ವರ್ಗಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಬಾಡದ ಆನಂದರಾಜ್, 2002ರಲ್ಲಿ ಎಸ್ಪಿಯಾಗಿದ್ದ ಅಲೋಕ್‌ಕುಮಾರ್ ಅವರ ಕಾನೂನು ಅಧಿಕಾರಿಯನ್ನು ಇಂದು 2022 ರಲ್ಲಿ ಎಸ್ಪಿಯಾಗಿರುವ ರಿಷ್ಯಂತ್ ಅವರ ಅಧಿಕಾರದಲ್ಲಿ ಕಾಣುತ್ತಿದ್ದೇವೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಪೂರ್ವ ವಲಯ ಐಜಿಪಿ, ನಗರ ಡಿವೈಎಸ್ಪಿ ನರಸಿಂಹ ತಾಮ್ರಧ್ವಜ, ಮಾಜಿ ಮಹಾಪೌರ ಎಸ್.ಟಿ.ವೀರೇಶ್, ಬಿಜೆಪಿಯ ದಲಿತ ಮುಖಂಡ ಆಲೂರು ನಿಂಗರಾಜ್, ಪಾಲಿಕೆ ಸದಸ್ಯ ಶಿವನಗೌಡ ಪಾಟೀಲ್. ವರ್ತಕ ಮಹಂತೇಶ್ ಒಣರೊಟ್ಟಿ, ಬಿಜೆಪಿ ಮುಖಂಡ ವೈ. ಮಲ್ಲೇಶ್, ರೈತ ಮುಖಂಡ ಕೆ.ಪಿ. ಕಲ್ಲಿಂಗಪ್ಪ, ಅಣಜಿ ಬಸವರಾಜ್ ಮತ್ತಿತರರು ಇದ್ದರು.


# ನಗರದಲ್ಲಿ ಇಂದು ಶಿವರಾಜ್ ಕುಮಾರ್ 60 ನೇ ಜನ್ಮ ದಿನಾಚರಣೆ



ಅಖಿಲ ಕರ್ನಾಟಕ ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘಗಳ ಒಕ್ಕೂಟ, ಅಖಿಲ ಕರ್ನಾಟಕ ಶಿವರಾಜ್ ಕುಮಾರ್ ಅಭಿಮಾನಿಗಳ ಸಂಘ, ಅಖಿಲ ಕರ್ನಾಟಕ ಪುನೀತ್ ರಾಜ್ ಕುಮಾರ್ ಅಭಿಮಾನಿಗಳ ಸಂಘಗಳ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 11.30 ಕ್ಕೆ ಜಯದೇವ ವೃತ್ತದಲ್ಲಿ ಕೇಕ್ ಕತ್ತರಿಸುವ ಮೂಲಕ ಶಿವರಾಜ್‌ಕುಮಾರ್ ಅವರ 60 ನೇ ಜನ್ಮದಿನವನ್ನು ಆಚರಿಸಲಾಗುವುದು.

ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಮತ್ತಿತರೆ ಗಣ್ಯರು ಭಾಗವಹಿಸಲಿದ್ದಾರೆ. ನಂತರ ಅಶೋಕ ಚಿತ್ರಮಂದಿರದಲ್ಲಿ ಮಧ್ಯಾಹ್ನ 1 ಗಂಟೆಗೆ 'ಭೈರಾಗಿ' ಚಿತ್ರದ ಯಶಸ್ಸಿನ ಹಿನ್ನೆಲೆಯಲ್ಲಿ ಸಿಹಿ ವಿತರಣೆ ಮಾಡಲಾಗುವುದು.

# ಚಿತ್ತಾಕರ್ಷಕ ಬೆಳ್ಳಿಗೆರೆ ಚಿಟ್ಟೆ



ಚಿಟ್ಟೆಗಳದ್ದು ಅದ್ಭುತ ಲೋಕ. ತನ್ನ ವರ್ಣ ಸಂಯೋಜನೆಯಲ್ಲಿನ ವೈವಿಧ್ಯಕ್ಕೆ ಹೆಸರಾಗಿದ್ದು, ಕೀಟ ಪ್ರಪಂಚದಲ್ಲೇ ಉನ್ನತ ಸ್ಥಾನವನ್ನು ಪಡೆದಿವೆ. ದೇಹದ ಆಕೃತಿ ಮತ್ತು ರೆಕ್ಕೆಗಳ ಚಿತ್ತಾರದಲ್ಲಿ ಅನೇಕ ವ್ಯತ್ಯಾಸಗಳನ್ನು ಕಾಣಬಹುದು. ಸಸ್ಯಲೋಕದ ಹೂವುಗಳೊಂದಿಗೆ ಸ್ಪರ್ಧೆಗೆ ಬಿದ್ದಂತೆ ಬಣ್ಣಗಳಿಂದ ತುಂಬಿದ ರೆಕ್ಕೆಗಳಿಂದ ಜಗತ್ತೇ ನಿಬ್ಬೆರಗಾಗುವಂತೆ ಇವು ವಿಕಾಸ ಹೊಂದಿವೆ. ಈ ಲೋಕದಲ್ಲಿ ಬೆಳ್ಳಿಗೆರೆ ಎಂಬ ಪ್ರಭೇದವಿದೆ. ಇದನ್ನು ಆಂಗ್ಲಭಾಷೆಯಲ್ಲಿ ಕಾಮನ್ ಸಿಲ್ವರ್ ಲೈನ್ (Common Silver-line) ಎಂದು ಮತ್ತು ಪ್ರಾಣಿಶಾಸ್ತ್ರೀಯವಾಗಿ ಸ್ಪಿನ್ಡಾಸಿಸ್ ವಲ್ಕಾನಸ್ (Spindasis vulcanus) ಎನ್ನುವರು. ಇದು ಲೈಸೀನಿಡೀ ಕುಟುಂಬದ ಸದಸ್ಯ.

ಮೇಲ್ಭಾಗ ಕಡು-ಕಂದು ಬಣ್ಣ. ಮುಂದಿನ ರೆಕ್ಕೆಗಳಲ್ಲಿ ಗಾಢವಾದ ಕಪ್ಪು ಚುಕ್ಕೆಗಳ ಕಿತ್ತಳೆ-ಹಳದಿ ಬಣ್ಣದ ಅಡ್ಡಪಟ್ಟಿಗಳಿರುತ್ತವೆ. ಗಂಡಿನಲ್ಲಿ ಐದು ಮತ್ತು ಹೆಣ್ಣಿನಲ್ಲಿ ಆರು ಅಂತಹ ಪಟ್ಟಿಗಳಿರುತ್ತವೆ. ಗಂಡಿನಲ್ಲಿ ಈ ಅಡ್ಡ ಪಟ್ಟಿಗಳು ಬಿಳಿ-ಮಿಶ್ರಿತ ಹೊಳಪನ್ನು ಪಡೆದುಕೊಂಡಿವೆ. ಹಿಂದಿನ ರೆಕ್ಕೆಯ ತುದಿಯಲ್ಲಿ ಉಚ್ಛ ಹಳದಿ ಅಥವಾ ಕಿತ್ತಳೆ ಬಣ್ಣದ ಎರಡು ಚುಕ್ಕೆಗಳು ಮತ್ತು ಎರಡು ಸೂಕ್ಷ್ಮ ಬಾಲಗಳಿರುತ್ತವೆ. ರೆಕ್ಕೆಯ ಕೆಳಭಾಗವು ಪೇಲವ ಹಳದಿ ಬಣ್ಣದ್ದಾಗಿದ್ದು ಗಾಢವಾದ ಕಪ್ಪು-ಕಂದು ಅಂಚುಗಳಿರುವ ಕೆಂಪು ಪಟ್ಟಿಗಳಿರುತ್ತವೆ. ರೆಕ್ಕೆಯ ಹರವು 26 ರಿಂದ 34 ಮಿ.ಮೀ. ಇರುತ್ತದೆ. ಹೆಣ್ಣು ಗಾತ್ರದಲ್ಲಿ ದೊಡ್ಡದಿರುತ್ತದೆ. ಚುರುಕಾದ ಹಾರಾಟಗಾರ. ಸುಟ್ಟ ಮರ ಮತ್ತು ಹುಲ್ಲಿಗೆ ವಿಶಿಷ್ಟ ಆಕರ್ಷಣೆ. ಭೂಮಿಯ ಹತ್ತಿರ ಕೆಳಮಟ್ಟದಲ್ಲಿ ಬೆಳೆಯುವ ಗಿಡಗಳ ಹೂಗಳಿಗೆ ಮಕರಂಧಕ್ಕಾಗಿ ಭೇಟಿ ನೀಡುತ್ತವೆ. ತೇವಾಂಶವಿರುವ ಮಣ್ಣು ಮತ್ತು ಪ್ರಾಣಿಗಳ ಮಲದಿಂದ ಲವಣಾಂಶಗಳನ್ನು ಹೀರುತ್ತವೆ.

ಭಾರತದೆಲ್ಲೆಡೆ ಕಾಣಸಿಗುವ ಚಿಟ್ಟೆಗಳಿವು. ಶ್ರೀಲಂಕಾ, ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಥೈಲ್ಯಾಂಡ್‌ಗಳಲ್ಲೂ ಇವೆ. ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಕಾಣಸಿಗುವುದು. ಪ್ರತಿ ಹೂವಿಗೂ ಭೇಟಿ ನೀಡುತ್ತಾ ಪರಾಗಸ್ಪರ್ಶ ಕ್ರಿಯೆಗೆ ಸಹಕರಿಸಿ ಮಕರಂಧವೆಂಬ ಕೂಲಿ ಪಡೆಯುತ್ತವೆ. ಹೂವಿಗೂ-ಚಿಟ್ಟೆಗಳಿಗೂ ಅವಿನಾಭಾವ ಸಂಬಂಧವಿದೆ. ಒಂದಕ್ಕೊಂದು ಪೂರಕವಾಗಿ ಬದುಕಿ ತಮ್ಮ ಸಂತತಿಯ ಉಳಿವಿಗೆ ಶ್ರಮಿಸುತ್ತವೆ. ಅಂತೆಯೇ ನಗರೀಕರಣ, ಕೈಗಾರಿಕೀಕರಣ ಮತ್ತು ಕೃಷಿಯಲ್ಲಿ ಹೆಚ್ಚಿದ ಕೀಟನಾಶಕಗಳ ಬಳಕೆಯಿಂದ ಈ ಮೋಹಕ ಚಿಟ್ಟೆ ಸಂತತಿ ಕಂಗೆಟ್ಟಿದೆ. ವಾಯು ಮಾಲಿನ್ಯವೂ ಇವುಗಳ ಸಂತತಿ ಕ್ಷೀಣಿಸಲು ಕಾರಣವಾಗಿದೆ. ಸಸ್ಯಸಂಕುಲ ಉಳಿದರೆ ಮಾತ್ರ ಎಲ್ಲಾ ಜೀವಿಗಳಿಗೂ ಆಹಾರ ದೊರಕುತ್ತದೆ. ಸಸ್ಯಗಳ ಪರಾಗಸ್ಪರ್ಶಕ್ಕೆ ಚಿಟ್ಟೆ, ಜೇನುನೊಣ ಮತ್ತು ಇತರೆ ಕೀಟಗಳಿರಬೇಕು. ಖಾಲಿ ನಿವೇಶನಗಳಲ್ಲಿರುವ ಪೊದೆ ಸಸ್ಯಗಳು ಇಂತಹ ಉಪಯುಕ್ತ ಕೀಟಗಳಿಗೆ ಆವಾಸ ಮತ್ತು ಆಹಾರವನ್ನು ಒದಗಿಸುತ್ತಿವೆ. ಒಂದು ಪ್ರದೇಶದಲ್ಲಿನ ಚಿಟ್ಟೆಗಳ ಸಂತತಿ ಅಲ್ಲಿನ ಆರೋಗ್ಯ ಪೂರ್ಣ ಪರಿಸರವನ್ನು ಸೂಚಿಸುತ್ತವೆ. ಅವುಗಳ ಉಳಿವು ಚಿಟ್ಟೆಗಳ ಉಳಿವು. ವಿಶ್ವದ ಎಲ್ಲಾ ಜೀವಿಗಳನ್ನು ಸಂರಕ್ಷಿಸುವುದು ನಮ್ಮ ಉಳಿವಿಗೆ ಅಗತ್ಯ.

ಚಿತ್ರ: ಲೇಖಕರದ್ದು

**ಡಾ. ಎಸ್. ಶಿಶುಪಾಲ**, ಪ್ರಾಧ್ಯಾಪಕರು,
ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ.
ಮೊ:8792674905,
ಇಮೇಲ್: sskumb@gmail.com

# ಕನ್ನಡ ಪರೀಕ್ಷೆಗಳಿಗೆ ಅರ್ಜಿ ಆಹ್ವಾನ

ದಾವಣಗೆರೆ, ಜು. 11 - ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಕನ್ನಡ ಪ್ರವೇಶ, ಕಾವ, ಜಾಣ, ರತ್ನ ಪರೀಕ್ಷೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಡಿಸೆಂಬರ್ ಕೊನೆಯ ವಾರದಲ್ಲಿ ನಡೆಯುವ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಲು ಆಗಸ್ಟ್ 31 ಕೊನೆಯ ದಿನವಾಗಿದೆ. ವಿವರಗಳಿಗೆ ಗೌರವ ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-18, ದೂರವಾಣಿ 080-26623584, 26612991, 22423867, 26672992, 8660777643 ನ್ನು ಸಂಪರ್ಕಿಸಬಹುದು ಎಂದು ಪರಿಷತ್ತಿನ ಗೌರವ ಕಾರ್ಯದರ್ಶಿ ನೇ.ಭ.ರಾಮಲಿಂಗಶೆಟ್ಟಿ ತಿಳಿಸಿದ್ದಾರೆ.

# ಕುರ್ಕಿಯಲ್ಲಿ 14ಕ್ಕೆ ಗುರುಪೌರ್ಣಿಮೆ

ದಾವಣಗೆರೆ, ಜು.11- ತಾಲ್ಲೂಕಿನ ಕುರ್ಕಿ ಗ್ರಾಮದಲ್ಲಿರುವ ಶಿರಡಿ ಶ್ರೀ ಸಾಯಿಬಾಬಾ ಮಂದಿರದಲ್ಲಿ ಗುರು ಪೌರ್ಣಿಮೆ ಪ್ರಯುಕ್ತ ಇದೇ ದಿನಾಂಕ 14ರ ಗುರುವಾರ ಮೂರ್ತಿಗಳ ಪ್ರತಿಷ್ಠಾಪನೆ, ಸತ್ಯನಾರಾಯಣ ಪೂಜೆ ಮತ್ತು ಅನ್ನ ಸಂತರ್ಪಣೆ ಆಯೋಜಿಸಲಾಗಿದೆ ಎಂದು ಶ್ರೀ ಸಚ್ಚಿದಾನಂದ ಶಿರಡಿ ಶ್ರೀ ಸಾಯಿ ಸಮಿತಿ ಮತ್ತು ಕುರ್ಕಿ ಗ್ರಾಮಸ್ಥರು ತಿಳಿಸಿದ್ದಾರೆ.

**ಬಾಡಿಗೆಗೆ ಇದೆ**
ದಾವಣಗೆರೆ ಹದಡಿ ಮುಖ್ಯರಸ್ತೆ, ಟಿ.ವಿ.ಎಸ್. ಶೋ ರೂಂ ಪಕ್ಕ, ಉದಯ ಮಾರ್ಟ್ (ವಾಣಿ ರೈಸ್ ಮಿಲ್) ಎದುರು, ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಸುಸಜ್ಜಿತವಾದ ಮಳಿಗೆ 1ನೇ ಮಹಡಿ ಎಲ್ಲಾ ರೀತಿಯ ವ್ಯಾಪಾರಗಳಿಗೆ ಯೋಗ್ಯವಾದ 1104 ಅಡಿಗಳು ಹಾಗೂ 3250 ಅಡಿ ಸೆಲ್ಲರ್ ಬಾಡಿಗೆಗೆ ಇದೆ. ಮತ್ತು 4508 ಮೇಲ್ಭಾವಣಿ ಖಾಲಿ ಜಾಗ ಬಾಡಿಗೆಗೆ ಇದೆ.
96205 95579, 87924 53686

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 30x40 ಪಶ್ಚಿಮ ಅಕ್ಕ-ಪಕ್ಕ, ಹೊಸ ಬನಶಂಕರಿ ಬಡಾವಣೆಯಲ್ಲಿ 40x50 ಉತ್ತರ-ಪಶ್ಚಿಮ ಕಾರ್ನರ್, ಬಾಲಾಜಿ ಬಡಾವಣೆಯಲ್ಲಿ 30x50 ಉತ್ತರ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಪೂರ್ವ 40x60, ಪಶ್ಚಿಮ 40x30, 30x40, ಬನಶಂಕರಿ ಬಡಾವಣೆ ಪಶ್ಚಿಮ 40x70 (60 ಅಡಿ ರಸ್ತೆ) ಪೂರ್ವ-ದಕ್ಷಿಣ ಕಾರ್ನರ್ 30x50 (60 ಅಡಿ ರಸ್ತೆ)
ಐಗೂರು ವಿಜಯಕುಮಾರ್
99457 02495

**ಬೇಕಾಗಿದ್ದಾರೆ**
ದಾವಣಗೆರೆಯ ಶ್ರೀ ವಿನಾಯಕ ನಗರ ಸಾರಿಗೆ ಬಸ್ಸಿನಲ್ಲಿ ಕೆಲಸ ಮಾಡಲು ಡ್ರೈವರ್‌ಗಳು ಮತ್ತು ಪುರುಷ ಹಾಗೂ ಮಹಿಳಾ ಕಂಡಕ್ಟರ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ :
63647 83999

**ಗ್ಯಾಸ್ ಗೀಜರ್ ವಾಟರ್ ಪ್ಯೂರಿ ಫೈಯರ್ ಡೋರ್ ಸರ್ವೀಸ್‌ಗಾಗಿ**
ಜ್ಯೋತಿ ಮೆಟಲ್ಸ್, ದಾವಣಗೆರೆ
98800 34643, 94800 83754

**ಮನೆ ಮಾರಾಟಕ್ಕಿದೆ**
ನಿಟುವಳ್ಳಿ ಮಣಿಕಂಠ ಸರ್ಕಲ್ ಹತ್ತಿರ 10x30 ಮೂರು ಅಂತಸ್ಥಿನ ಮನೆ ಮಾರಾಟಕ್ಕಿದೆ
89716 93209, 89711 92936

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಪೂರ್ವಕ್ಕೆ : 40x60, ಉತ್ತರಕ್ಕೆ:30x50, ಪಶ್ಚಿಮಕ್ಕೆ:30x50, ಉತ್ತರಕ್ಕೆ : 30x40,
ದಕ್ಷಿತ್ ಐನಳ್ಳಿ, ರಿಯಲ್ ಎಸ್ಟೇಟ್ ಏಜೆಂಟ್
ಫೋನ್ : 77955 06795

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೋರಿಯರ್ ಸೌಲಭ್ಯವಿದೆ.
97432 17566, 91084 18233

**For Sale**
2BHK Flat for Sale, MCC `B' Block, davanagere.
Contact :
96863 96992, 99001 18054

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**Work From Home**
Male/ Female,
Full / Part time Hand writing work. Small to Capital Letter.
Earn Per Month. 10,000/- to 12,000/-
Calling time 10 AM to 7 PM
89718 52431

## ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಹರಿಹರ.

### ಅಸಲು ದಾವಾ ನಂ. 62/2022

ವಾದಿ : ಶ್ರೀ ಜಿ.ಆರ್. ಸಿಂಧೆ, ಬಿನ್ ಲೇಟ್ ರಾಮಚಂದ್ರ ಶಿಂಧೆ, ವಯಸ್ಸು ಸುಮಾರು 74 ವರ್ಷ, ನಿವೃತ್ತ ಪಶು ವೈದ್ಯಕೀಯ ಮೇಲ್ವಿಚಾರಕರು, ವಾಸ : ಮನೆ. ನಂ. 215, ಸಂಜಯ ನಿಲಯ, ಗುತ್ತೂರು ಕಾಲೋನಿ.,ಫಿ, ಹೆಚ್.ಪಿ. ಪೆಟ್ರೋಲ್ ಬಂಕ್ ಎದುರು, ಹರಿಹರ, ದಾವಣಗೆರೆ ಜಿಲ್ಲೆ ವಿರುದ್ಧ/-

ಪ್ರತಿವಾದಿಗಳು : ಶ್ರೀಮತಿ ಸವಿತ ಯಾನೇ ರೇಣುಕಾ ಮತ್ತು ಇತರರು

ಪ್ರತಿವಾದಿ : 3) ಲತಾ ಬಿನ್ ಲೇಟ್ ಪ್ರಕಾಶ್ ಎನ್. ರೇವಣಕರ್ ನೋಟೀಸ್‌ದಾರರು : ವಯಸ್ಸು ಸುಮಾರು 38 ವರ್ಷ, ಮನೆಕೆಲಸ, ವಾಸ : ನಿರ್ಮಲ ನಿಲಯ, ದೊಡ್ಡಪೇಟೆ, ರಾಣೇಬೆನ್ನೂರು ಸಿಟಿ, ಹಾವೇರಿ ಜಿಲ್ಲೆ.

**ಸಿಪಿಸಿ ಆದೇಶ 5 ನಿಯಮ 20ರ ಅಡಿಯಲ್ಲಿ ಪ್ರತಿವಾದಿ ನಂ. 3ರವರ ವಿರುದ್ಧ ನೀಡಲಾದ ಪ್ರಕಟಣಾ ನೋಟೀಸು**

ಮೇಲ್ಕಂಡ ದಾವೆಯನ್ನು ವಾದಿಯರು ಪ್ರತಿವಾದಿಯರ ವಿರುದ್ಧ ಚೆಕ್ ಬಾಬ್ತು ಹಣದ ವಸೂಲಾತಿಗಾಗಿ ಮತ್ತು ಇತರೆ ಪರಿಹಾರ ಕೋರಿ ಮಾನ್ಯ ಘನ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ನೀವು ಪ್ರತಿವಾದಿ ನಂ. 3 ಆಗಿದ್ದು, ನ್ಯಾಯಾಲಯವು ನಿಮ್ಮ ವಿರುದ್ಧ ನ್ಯಾಯಾಲಯದಿಂದ ಸಮನ್ಸ್ ಅನ್ನು ನೋಂದಾಯಿತ ಅಂಚೆಯ ಮೂಲಕ ಕಳಿಸಿದ್ದರೂ ಸಹಾ ಅವು ನಿಮಗೆ ಜಾರಿಯಾಗಿರುವುದಿಲ್ಲ. ಕಾರಣ ನಿಮ್ಮ ಹಾಜರಾತಿಗಾಗಿ ದಿನಾಂಕ : 6.8.2022ರಂದು ಬೆಳಗ್ಗೆ 11.00 ಗಂಟೆಗೆ ಮುದ್ದತ್ತು ನಿಗದಿಯಾಗಿದ್ದು, ಆ ದಿನ ನೀವು ಖುದ್ದಾಗಿಯಾಗಲೀ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ವಿರುದ್ಧ ಏಕಪಕ್ಷೀಯ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ, ದಿನಾಂಕ : 5.7.2022 ರಂದು ಕೊಡಲ್ಪಟ್ಟಿದೆ.

| ವಾದಿಯ ಪರ ವಕೀಲರು | ನ್ಯಾಯಾಲಯದ ಆದೇಶದ ಮೇರೆಗೆ |
|---|---|
| ಸಹಿ/- (ವಿ. ತಿಮ್ಮೇಶ್) | ಸಹಿ/- ಶಿರಸ್ತೇದಾರರು |
| ಫೋ. : 9448316792 | ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರವರ |
| ಸ್ಥಳ : ಹರಿಹರ. ದಿನಾಂಕ : 5.7.2022 | ನ್ಯಾಯಾಲಯ, ಹರಿಹರ. |

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ದಾವಣಗೆರೆ ವಿಭಾಗ, ದಾವಣಗೆರೆ

ಸಂ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/1022/2022-23 ದಿನಾಂಕ: 08.07.2022

**ಸಂಧಾನ ಪ್ರಕಟಣೆ ಸಂಖ್ಯೆ: 04/2022-23**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ, ಮಲೆಬೆನ್ನೂರು ಬಸ್ ನಿಲ್ದಾಣದ ಮಳಿಗೆ ಸಂಖ್ಯೆ-01ಕ್ಕೆ (ಶಾಶ್ವತ ಸ್ಥಳ 05 ವರ್ಷ) ಹಾಗೂ ಹರಿಹರ ಬಸ್ ನಿಲ್ದಾಣದ ನಾಣ್ಯ ಚಾಲಿತ ಮಾನವ ತೂಕದ ಯಂತ್ರಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನ ಮೂಲಕ (ಮಾತುಕತೆ ಮೂಲಕ) ಅರ್ಜಿ ಆಹ್ವಾನಿಸಲಾಗಿದೆ.

ಸದರಿ ಮಾಹಿತಿಯನ್ನು ನಿಗಮದ ವೆಬ್‌ಸೈಟ್ **ksrtc.karnataka.gov.in** ನಲ್ಲಿ ದಿ: 08.07.2022 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ-577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: ವಿಭಾಗೀಯ ಸಂಚಾರ ಅಧಿಕಾರಿ - 7760990452, ಸಹಾಯಕ ಸಂಚಾರ ವ್ಯವಸ್ಥಾಪಕರು - 7760990461

ಸಹಿ/-,
ವಾಸಾಸಂಇ/ವಾಪ್ರ/ಎಲ್‌ಸಿ/1296/2022-23 ವಿಭಾಗೀಯ ನಿಯಂತ್ರಣಾಧಿಕಾರಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ದಾವಣಗೆರೆ ವಿಭಾಗ, ದಾವಣಗೆರೆ

ಸಂ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/1023/2022-23 ದಿನಾಂಕ: 08.07.2022

**ಸಂಧಾನ ಪ್ರಕಟಣೆ ಸಂಖ್ಯೆ: 04/2022-23**

**(ಬಸ್ ನಿಲ್ದಾಣಗಳ ಹೊರ ಆವರಣದ ಜಾಹೀರಾತುಗಳಿಗೆ ಪ್ಯಾಕೇಜ್ ಮಾದರಿಯಲ್ಲಿ)**

ಕ.ರಾ.ರ.ಸಾ.ನಿಗಮದ ದಾವಣಗೆರೆ ವಿಭಾಗದ ವ್ಯಾಪ್ತಿಯಲ್ಲಿ ಇರುವ, ಹರಿಹರ ಬಸ್ ನಿಲ್ದಾಣದ, ಹೊರಭಾಗದಲ್ಲಿ ಯೂನಿಫೋಲ್ಸ್, ಹೋರ್ಡಿಂಗ್ಸ್ ಮತ್ತು ಆರ್ಚ್‌ಗಳು ಖಾಲಿ ಇದ್ದು ಹಾಗೂ ಜಗಳೂರು ಬಸ್ ನಿಲ್ದಾಣದಲ್ಲಿ ಹೋರ್ಡಿಂಗ್ಸ್‌ಗಳು ಖಾಲಿ ಇದ್ದು, ಸದರಿ ಬಸ್ ನಿಲ್ದಾಣದ ಹೊರ ಭಾಗದ ಸ್ಥಳಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನದ ಮೂಲಕ ಪ್ರಕಟಣೆ ಹೊರಡಿಸಲಾಗಿರುತ್ತದೆ.

ಸದರಿ ಮಾಹಿತಿಯನ್ನು ನಿಗಮದ ವೆಬ್‌ಸೈಟ್ **ksrtc.karnataka.gov.in** ನಲ್ಲಿ ದಿ: 08.07.2022 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ-577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: ವಿಭಾಗೀಯ ಸಂಚಾರ ಅಧಿಕಾರಿ - 7760990452, ಸಹಾಯಕ ಸಂಚಾರ ವ್ಯವಸ್ಥಾಪಕರು - 7760990461

ಸಹಿ/-,
ವಾಸಾಸಂಇ/ವಾಪ್ರ/ಎಲ್‌ಸಿ/1298/2022-23 ವಿಭಾಗೀಯ ನಿಯಂತ್ರಣಾಧಿಕಾರಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

**ಡಿಪ್ಲೋಮಾ ಸರ್ಟಿಫಿಕೇಟ್ ಕೋರ್ಸ್‌ಗಳು**
1)ಡಿಪ್ಲೋಮಾ ಇನ್ ಪೇಷೆಂಟ್ ನರ್ಸಿಂಗ್. 2)ಡಿಪ್ಲೋಮಾ ಇನ್ ಎಕ್ಸ್‌ರೇ. 3)ಡಿಪ್ಲೋಮಾ ಇನ್ ಲ್ಯಾಬ್ ಟೆಕ್ನಿಷಿಯನ್. 5) ಡಿಪ್ಲೋಮಾ ಇನ್ ಆಪರೇಷನ್ ಟೆಕ್ನಿಷಿಯನ್. ಅನುಭವ ಇರುವವರು ಹಾಗೂ ತರಬೇತಿ ಪಡೆಯಲು ಇಚ್ಚಿಸುವವರು ಸಂಪರ್ಕಿಸಿ
86602-35013

**ಟೀಚರ್, KHB ಸೈಟುಗಳು ಮಾರಾಟಕ್ಕಿವೆ**
ಸರ್ಕಾರಿ ನೌಕರರ ಬಡಾವಣೆ ಪೂರ್ವ 30x40, 40x60, ಪಶ್ಚಿಮ 30x40, ಉತ್ತರ-ಪಶ್ಚಿಮ ಕಾರ್ನರ್ 30x40 ಡಬಲ್ ರೋಡ್ ಪೂರ್ವ 4700 ಅಡಿ, ಪೂರ್ವ-ಪಶ್ಚಿಮ 6600 ಚದರ, KHB (ಡಬಲ್ ರೋಡ್) ದಕ್ಷಿಣ 40x60.
ಐಗೂರು ವಿಜಯಕುಮಾರ್
99457 02495

**ಮನೆ ಬಾಡಿಗೆಗೆ ಇದೆ**
ಎಂ.ಸಿ.ಸಿ. 'ಬಿ' ಬ್ಲಾಕ್ ಡೋರ್ ನಂ. 2551/18 6ನೇ ಕ್ರಾಸ್, 13ನೇ ಮುಖ್ಯ ರಸ್ತೆ, ಕುವೆಂಪು ನಗರದಲ್ಲಿ 2BHK ಗ್ರೌಂಡ್ ಫ್ಲೋರ್ ಮನೆ ಬಾಡಿಗೆಗೆ ಇದೆ.
ಸಂಪರ್ಕಿಸಿ:
ಮೊ: 96325 97507
99453 33707

**WANTED**
1. Lab Technician - Dip. in Lab technician
2. Receptionist - Any degree holder can Apply
Shilpa Diagnostics,
MCC B Block,
Near Swimming Pool, Davangere.
98440 65638

**ಬೇಕಾಗಿದ್ದಾರೆ**
ಅಕ್ಷಯ ದಾವಣಗೆರೆ ಬಂಗಾರದ ಅಂಗಡಿಯಲ್ಲಿ ಗುಮಾಸ್ತ ಕೆಲಸಕ್ಕೆ ಬೇಕಾಗಿದ್ದಾರೆ.
76193 28978

**ಬೇಕಾಗಿದ್ದಾರೆ**
ಟ್ಯಾಲಿ ಮತ್ತು ಕನ್ನಡ ಟೈಪಿಂಗ್ ಬಲ್ಲ ಮಹಿಳೆ ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಕೆಲಸದ ಸಮಯ : ಬೆಳಿಗ್ಗೆ 10.00 ರಿಂದ ಸಂಜೆ 5.30ರವರೆಗೆ
ಶ್ರೀ ಮಾರುತಿ ಚಿಟ್ ಫಂಡ್ಸ್
ಭಗತ್ ಸಿಂಗ್ ನಗರ, ದಾವಣಗೆರೆ.
77951 49297, 94483 39231

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್
ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಅಡಿಕೆ ತೆಂಗು , ಮಾವು ಸಪೋಟ, ಶ್ರೀಗಂಧ, ಹೆಬ್ಬೇವು, ಮಹಾಘನಿ, ನಿಂಬೆ, ದಾಳಿಂಬೆ, ಗುಲಾಬಿ ಇನ್ನಿತರೆ ಗಿಡಗಳು ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ. ಸಂಪರ್ಕಿಸಿ.
94484 39639

**ಕೆಲಸಕ್ಕೆ ಬೇಕಾಗಿದ್ದಾರೆ**
Sri Kalleshwara Enterprises
(Authorised Service center for V-Guard Products) # 2019/2, Ground Floor, 2nd Main, MCC `A' Block, Davanagere. -577004
86609 39327
ವಿದ್ಯಾರ್ಹತೆ : ITI (Ele., Mech., Ele.)
Data Entry operator (Computer knowledge)
Ladies , Tech Boys.

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ ಉತ್ತರಕ್ಕೆ 40x60, ದಕ್ಷಿಣಕ್ಕೆ :40x60 80 ಅಡಿ ರೋಡಿಗಿದೆ. 30x40, 30x40 ದಕ್ಷಿಣ: ಅಕ್ಕ-ಪಕ್ಕ, ಪಶ್ಚಿಮಕ್ಕೆ : 30x50 40 ಅಡಿ ರೋಡಿಗಿದೆ. ರೇಟ್ 1750 ರೂ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
ಫೋನ್ : 99166 12110

**ಬೇಕಾಗಿದ್ದಾರೆ**
ಗಾರ್ಡನ್ ಕೆಲಸಕ್ಕೆ
ವಿದ್ಯಾನಗರ 2nd ಬಸ್ ಸ್ಟಾಪ್ ಹತ್ತಿರ ಗಾರ್ಡನ್ ಕೆಲಸ ಮಾಡಲು ಹೆಣ್ಣು ಮಕ್ಕಳು ಅಥವಾ ಗಂಡಸರು ಬೇಕಾಗಿದ್ದಾರೆ
94810 38402, 99162 36521

**ಶ್ರೀ ಅಂಜನಿಪುತ್ರ ಹೋಂ ಕೇರ್ ಸರ್ವೀಸ್**
ವಯೋವೃದ್ಧರನ್ನು, ವಯೋವೃದ್ಧ ರೋಗಿಗಳನ್ನು ನೋಡಿಕೊಳ್ಳಲು ಬೇಕಾಗಿದ್ದಲ್ಲಿ
ಸಂಪರ್ಕಿಸಿ : 96864 55820
99024 64522, 90363 11304
ಮಹಿಳೆಯರು ಹಾಗೂ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ.

**ಸೈಟು ಮಾರಾಟಕ್ಕಿದೆ**
ಪಿ.ಜೆ. ಬಡಾವಣೆ
3ನೇ ಮೇನ್ ರೋಡ್,
80x60 East
ದೀಪಕ್ ಪಿ.ವಿ.
97405 90636

**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಆಫೀಸ್ ನಲ್ಲಿ ಡೆಲಿವರಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಟು ವ್ಹೀಲರ್ ಬೈಕ್ ಇರಬೇಕು. ಪೆಟ್ರೋಲ್ ಭತ್ಯೆ ಕೊಡಲಾಗುವುದು. ಇಂಗ್ಲೀಷ್ ಓದಲು, ಬರೆಯಲು ಬರಬೇಕು. ಮೂಲ ದಾಖಲಾತಿ ಗಳೊಂದಿಗೆ ಸಂಪರ್ಕಿಸಿ.
Call 98800 42597, 8971119130
Whatsapp 7019983025

**ಬಾಂಡ್ ಕಳೆದಿದೆ**
ವೀರಯ್ಯ M.J ಆದ ನಾನು ತಿಳಿಸುವುದೇನೆಂದರೆ ಷೇರ್ ಸರ್ಟಿಫಿಕೆಟ್ ನಂ: FOLIO No:1) DSV0326 2) DSV0235 ಎಂದು ಷೇರ್ ಸರ್ಟಿಫಿಕೆಟ್‌ಗಳನ್ನು 26.6.2022 ರಂದು ಮನೆ ಸ್ವಚ್ಛಗೊಳಿಸುವ ಸಮಯದಲ್ಲಿ ಆಕಸ್ಮಿಕವಾಗಿ ಕಳೆದು ಕೊಂಡಿರುತ್ತೇನೆ ಯಾರಿಗಾದರೂ ಸಿಕ್ಕಲ್ಲಿ ಸಂಪರ್ಕಿಸಿ:
96201 33261

**ಸೈಟ್ ಬೇಕಾಗಿದೆ**
KHB ಲೇಔಟ್‌ನಲ್ಲಿ 30/50 ಪೂರ್ವ / ಉತ್ತರ ಸೈಟ್ ನಮಗೆ ಬೇಕಾಗಿದೆ. ಕೊಡಲು ಬಯಸುವವರು ಸಂಪರ್ಕಿಸಿ:
86181 82332

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಪ್ರವೇಶ ಪ್ರಕಟಣೆ 2022-23**
DHI | DMLT
X-ray | DOT
ಡಿಪ್ಲೋಮೋ ಫಾರ್ಮಸಿ D pharm
ಕೆಲವೇ ಸೀಟುಗಳು ಮಾತ್ರ
ಎಲ್ಲ ವಿದ್ಯಾರ್ಥಿಗಳಿಗೂ ಸ್ಕಾಲರ್‌ಶಿಪ್ ಸೌಲಭ್ಯವಿದೆ. ಹಾಸ್ಟೆಲ್ ಸೌಲಭ್ಯವಿದೆ.
VS PARAMEDICAL COLLEGE, DAVANAGERE.
8553278258
9019580600

**WE ARE HIRING !!!**
Akshaya silvers & Gold Pvt Ltd :
* Tele caller * Marketing executives
Qualification : 2nd PU or any degree & 2 years of work experience.
Address : Opp. Halemane hotel AVK College Road, Davangere
Whatsapp : 7619328978
Toll Free : 1800-212-3522

**ನಿವೇಶನದ ಕ್ರಯ ಪತ್ರ ಕಳೆದಿದೆ**
ಶ್ರೀ ಎಸ್.ಎನ್. ನೀಲಕಂಠಪ್ಪ ಬಿನ್ ಲೇಟ್ ಸಂಗನಬಸಪ್ಪ ಹೆಸರಿನಲ್ಲಿರುವ 6 ಸರ್ವೆ ನಂ. 85/6ರಲ್ಲಿ ಮಹಾನಗರ ಪಾಲಿಕೆಯ ಚಾಲ್ತಿ # 2385 ಇದರ ಅಳತೆ 23x16, 8x40ರ ಸೈಟಿನ ಮೂಲ ಕ್ರಯ ಪತ್ರವು ದಿನಾಂಕ : 30.06.2022ರಲ್ಲಿ ದಾವಣಗೆರೆಯಿಂದ ಜಗಳೂರಿಗೆ ಹೋಗುವಾಗ ಕಳೆದಿದೆ. ಸಿಕ್ಕವರು ಈ ಕೆಳಗಿನ ಫೋನಿಗೆ ತಿಳಿಸಲು ಕೋರಿದೆ.
63604 72838, 97412 41896

**ಬೇಕಾಗಿದ್ದಾರೆ**
E ಕಾಮರ್ಸ್ Online ವ್ಯವಹಾರ ಮಾಡಲು ಬೇಸಿಕ್ ಕಂಪ್ಯೂಟರ್ ಮತ್ತು ಟ್ಯಾಲಿ ಹಾಗೂ ಇಂಗ್ಲೀಷ್ & ಹಿಂದಿ ಮಾತನಾಡಲು ಬೇಕಾಗಿದ್ದಾರೆ. ಸೂಕ್ತ ಸಂಬಳ ಕೊಡಲಾಗುವುದು
86605 96332, 78926 98713

**Preethi Foods**
Andhra Pickls
ವಿದೇಶಕ್ಕೆ ಉಪ್ಪಿನಕಾಯಿಗಳು ಪ್ಯಾಕಿಂಗ್ ಮಾಡಲಾಗುವುದು.
ನಿಜಲಿಂಗಪ್ಪ ಬಡಾವಣೆ, ಓಂಕಾರ ಗಣಪತಿ ದೇವಸ್ಥಾನ ಪಕ್ಕ
N.Surendra Rao
98445 46777

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ದಾಖಲೆಗಳು ಕಳೆದಿವೆ**
ದಾವಣಗೆರೆ ಸಿಟಿ ಶಕ್ತಿ ನಗರ, ಜಯನಗರ ಡೋರ್ # 382/1 ಎ ರಲ್ಲಿ ವಾಸವಿರುವ 53 ವಯಸ್ಸಿನ ಶ್ರೀಮತಿ ಮೀನಾಕ್ಷಿ.ಆರ್ ಲೇಟ್ ಕೆ. ಚಂದ್ರಶೇಖರ್ ಆದ ನಾನು ಶಕ್ತಿನಗರದಿಂದ ರಾಮನಗರಕ್ಕೆ ಬೆಳಿಗ್ಗೆ ಸಮಯ 7 ಗಂಟೆಗೆ KSRTC ಸಿಟಿ ಬಸ್‌ನಲ್ಲಿ ಹೋಗುವಾಗ ದಿನಾಂಕ 8.7.2022ರಂದು ನನ್ನ ಹೆಸರಿನಲ್ಲಿರುವ ಕ್ರಯ ಪತ್ರಗಳು (ಮೂಲ ಪ್ರತಿಗಳು) ಸೈಟ್ ನಂ. 206 ಕಳೆದು ಹೋಗಿದ್ದು, ಯಾರಿಗಾದರೂ ಸಿಕ್ಕಲ್ಲಿ ಈ ಮೇಲಿನ ವಿಳಾಸಕ್ಕೆ ಇಲ್ಲವೇ ಈ ಮೊಬೈಲ್ ಸಂಖ್ಯೆಗೆ ಕರೆ ಮಾಡಿ.
63601 58371

# ಅಪ್ಪರ್ ಭದ್ರಾದಿಂದಾಗುವ ಹೊಡೆತ ತಪ್ಪಿಸಲು ಶೀಘ್ರ ಮುಖ್ಯಮಂತ್ರಿ ಭೇಟಿಗೆ ನಿರ್ಧಾರ



ಜಿಲ್ಲೆಯ ಜನಪ್ರತಿನಿಧಿಗಳ, ರೈತರ ಸಭೆಯಲ್ಲಿ ಭದ್ರಾ ಕಾಡಾ ಅಧ್ಯಕ್ಷೆ ಪವಿತ್ರ ರಾಮಯ್ಯ

ದಾವಣಗೆರೆ, ಜು.11- ಭದ್ರಾ ಅಚ್ಚುಕಟ್ಟಿನ ರೈತರ ಹಿತ ಕಾಪಾಡಲು ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳ ರೈತರು, ಜನಪ್ರತಿನಿಧಿಗಳು, ಹೋರಾಟಗಾರರು ಒಗ್ಗಟ್ಟಾಗಿ ಹೋರಾಟ ಮಾಡದಿದ್ದರೆ ಜಲಾಶಯದ ನೀರು ಮುಂದೊಂದು ದಿನ ಮರೀಚಿಕೆ ಆಗಲಿದೆ ಎಂದು ಭದ್ರಾ ಅಧ್ಯಕ್ಷರಾದ ಶ್ರೀಮತಿ ಪವಿತ್ರ ರಾಮಯ್ಯ ಎಚ್ಚರಿಸಿದರು.

ನಗರದ ಹೊರವಲಯದಲ್ಲಿ ಸರ್ಕ್ಯೂಟ್ ಹೌಸ್‌ನಲ್ಲಿ ಇಂದು ಸಂಜೆ ಕರೆದಿದ್ದ ಜಿಲ್ಲೆಯ ಜನಪ್ರತಿನಿಧಿಗಳ, ರೈತ ಮುಖಂಡರ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಅಪ್ಪರ್ ಭದ್ರಾ ಯೋಜನೆಯ ಕಾಲುವೆಗೆ ಪ್ರತಿವರ್ಷ ಭದ್ರಾ ಜಲಾಶಯದಿಂದ 29.9 ಟಿಎಂಸಿ ನೀರು ತೆಗೆದುಕೊಳ್ಳಲು ಸರ್ಕಾರ ಈ ಹಿಂದೆಯೇ ತೀರ್ಮಾನಿಸಿದ್ದು, ಅದರಲ್ಲಿ 12.5 ಟಿಎಂಸಿ ನೀರು ಭದ್ರಾ ಜಲಾಶಯದಿಂದ ಮತ್ತು 17.4 ಟಿಎಂಸಿ ನೀರನ್ನು ತುಂಗಾ ಜಲಾಶಯದಿಂದ ಭದ್ರಾಗೆ ಲಿಫ್ಟ್ ಮಾಡಿ, ತುಂಗಾ ಜಲಾಶಯದಿಂದ ಬಳಕೆ ಆಗದೇ ಆಂಧ್ರಪ್ರದೇಶ ಸೇರುವ ನೀರನ್ನು ಅಪ್ಪರ್ ಭದ್ರಾ ಯೋಜನೆಗೆ ಬಳಸಿಕೊಳ್ಳಲು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲು ಶೀಘ್ರವೇ ಮುಖ್ಯಮಂತ್ರಿಗಳನ್ನು ಭೇಟಿ ಮಾಡೋಣ ಎಂದು ಪವಿತ್ರ ರಾಮಯ್ಯ ಜಿಲ್ಲೆಯ ಪ್ರತಿನಿಧಿಗಳಲ್ಲಿ ಮನವಿ ಮಾಡಿದರು.

ರೈತ ಸಂಘದ ರಾಜ್ಯಾಧ್ಯಕ್ಷ ಹೆಚ್.ಆರ್ ಬಸವರಾಜಪ್ಪ ಮಾತನಾಡಿ, ಸರ್ಕಾರ ನಡೆಸುವವರು ಚಿತ್ರದುರ್ಗ ಜಿಲ್ಲೆಯ ಜನಪ್ರತಿನಿಧಿಗಳ ಮಾತು ಕೇಳಿ ಅವರು ಹೇಳಿದ ತಕ್ಷಣ ಭದ್ರಾ ಡ್ಯಾಂನಿಂದ ಅಪ್ಪರ್ ಭದ್ರಾ ಕಾಲುವೆಗೆ ನೀರು ಹರಿಸುತ್ತಾರೆ. ಭದ್ರಾ ಕಾಡಾ ಸಮಿತಿಗೆ ಒಂದು ಮಾತು ಹೇಳದೇ ಸಿಎಂ ಹಾಗೂ ನೀರಾವರಿ ಸಚಿವರು ಅಧಿಕಾರಿಗಳ ಮೂಲಕ ಡ್ಯಾಂ ಗೇಟ್ ಎತ್ತಿಸುವುದು ಬಹಳ ಬೇಸರ ತಂದಿದೆ.

ಶಿವಮೊಗ್ಗ, ದಾವಣಗೆರೆ ಜಿಲ್ಲೆಯ ಜನಪ್ರತಿನಿಧಿಗಳು ಪಕ್ಷಾತೀತವಾಗಿ ಒಗ್ಗಟ್ಟಾಗಿ ಹೋರಾಟ ಮಾಡಲು ಸಜ್ಜಾಗಬೇಕು. ಅದರ ಪೂರ್ವಭಾವಿಯಾಗಿ ಶೀಘ್ರ ಸಿಎಂ ಭೇಟಿ ಮಾಡಿ, ಅಪ್ಪರ್ ಭದ್ರಾದಿಂದ ಮುಂದೆ ನಮ್ಮ ಜಿಲ್ಲೆಗಳ ರೈತರಿಗೆ ಎದುರಾಗುವ ಸಮಸ್ಯೆಗಳನ್ನು ವಿವರಿಸಬೇಕೆಂದು ಬಸವರಾಜಪ್ಪ ತಿಳಿಸಿದರು.

ಹರಿಹರ ಶಾಸಕ ಎಸ್. ರಾಮಪ್ಪ ಮಾತನಾಡಿ, ನಮ್ಮ ಪಾಲಿನ ನೀರನ್ನು ಮುಟ್ಟದಂತೆ ನಾವು ಒಗ್ಗಟ್ಟಾಗಿ ಸರ್ಕಾರವನ್ನು ಎದುರಿಸಬೇಕೆಂದರು.

ಮಾಜಿ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಮಳೆಗಾಲದಲ್ಲಿ ತುಂಗಾದಿಂದ ಸಾಕಷ್ಟು ನೀರು ನದಿಗೆ ಹರಿದು ಹೋಗುತ್ತಿದೆ. ಆ ಎಲ್ಲಾ ನೀರನ್ನು ಭದ್ರಾ ಮೇಲ್ದಂಡೆ ಯೋಜನೆಗೆ ಬಳಸಲು ಸರ್ಕಾರ ಹೊಸ ಡಿಪಿಆರ್ ಮಾಡಲು ಒತ್ತಾಯಿಸಬೇಕೆಂದರು.

ಮಾಜಿ ಶಾಸಕ ಬಸವರಾಜನಾಯ್ಕ ಮಾತನಾಡಿ, ಅಪ್ಪರ್ ಭದ್ರಾದಿಂದ ಅಚ್ಚುಕಟ್ಟಿನ ರೈತರಿಗೆ ಆಗುವ ತೊಂದರೆ ಬಗ್ಗೆ ಯಡಿಯೂರಪ್ಪ ಅವರಿಗೂ ಮನವರಿಕೆ ಮಾಡಿಕೊಡಬೇಕೆಂದರು.

ಹೊನ್ನಾಳಿ ಮಾಜಿ ಶಾಸಕ ಡಿ.ಜಿ ಶಾಂತನಗೌಡ ಅವರು, ದಾವಣಗೆರೆ, ಶಿವಮೊಗ್ಗ ಜಿಲ್ಲೆಗಳ ಜೊತೆಗೆ ತರೀಕೆರೆ, ಹರಪನಹಳ್ಳಿ ತಾಲ್ಲೂಕಿನವರನ್ನು ಕರೆಯಿರಿ ಎಂದರು.

ರೈತಪರ ಹೋರಾಟಗಾರ ತೇಜಸ್ವಿ ಪಟೇಲ್ ಮಾತನಾಡಿ, ಮುಖ್ಯಮಂತ್ರಿಗಳಿಗೆ ನೀರಾವರಿ ಬಗ್ಗೆ ಸಾಕಷ್ಟು ಅನುಭವವಿದೆ. ನಾವು ಒಟ್ಟಾಗಿ ಹೋಗಿ ಸಮಸ್ಯೆಗಳ ಬಗ್ಗೆ ವಿವರಿಸಿದರೆ ಅರ್ಥ ಮಾಡಿಕೊಳ್ಳುತ್ತಾರೆ. ಜೊತೆಗೆ ಅಚ್ಚುಕಟ್ಟಿನ ನಾಲೆಗಳ ಹಾಗೂ ರಸ್ತೆಗಳ ಅಭಿವೃದ್ಧಿಗೂ ವಿಶೇಷ ಅನುದಾನ ನೀಡುವಂತೆ ಒತ್ತಾಯಿಸೋಣ ಎಂದರು.

ಮುದೇಗೌಡ್ರ ಗಿರೀಶ್ ಮಾತನಾಡಿ, ಚಿತ್ರದುರ್ಗ ಜಿಲ್ಲೆಯ ಜನಪ್ರತಿನಿಧಿಗಳು ಕೇಳಿದ ತಕ್ಷಣ 5 ಟಿಎಂಸಿ ನೀರನ್ನು ಭದ್ರಾದಿಂದ ಹರಿಸಲು ಭರವಸೆ ನೀಡಿರುವ ಸಿಎಂ ಅವರ ನಡೆ ಬೇಸರ ತಂದಿದೆ ಎಂದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್ ಮಾತನಾಡಿ, ಅಚ್ಚುಕಟ್ಟಿನ ಹಿತ ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿ ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾಜಿ ಸಚಿವರೂ ಆದ ಶಾಸಕ ಎಸ್.ಎ. ರವೀಂದ್ರನಾಥ್ ಮಾತನಾಡಿ, ತಡವಾದರೂ ರೈತರಿಗೆ ಹಾಗೂ ಜನಪ್ರತಿನಿಧಿಗಳಿಗೆ ಭದ್ರಾ ಅಚ್ಚುಕಟ್ಟಿನ ಬಗ್ಗೆ ಕಾಳಜಿ ಬಂದಿರುವುದು ಸಂತಸ ತಂದಿದೆ. ನಾನು ಮೊದಲಿನಿಂದಲೂ ನಮ್ಮ ಅಚ್ಚುಕಟ್ಟಿನ ಕೊನೆ ಭಾಗದ ರೈತರ ಪರವಾಗಿ ಹೋರಾಟ ಮಾಡುತ್ತಲೇ ಬಂದಿದ್ದೇನೆ. ಈಗ ನಾವೆಲ್ಲರೂ ಒಂದಾಗಿ ಸಿಎಂ ಮೇಲೆ ಒತ್ತಡ ಹಾಕಿ ಅಪ್ಪರ್ ಭದ್ರಾದಿಂದ ನಮ್ಮ ರೈತರಿಗೆ ಆಗುವ ತೊಂದರೆ ತಪ್ಪಿಸಬೇಕೆಂದರು.

ಭದ್ರಾ ಯೋಜನೆಯ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷ ವೈ. ದ್ಯಾವಪ್ಪ ರೆಡ್ಡಿ, ಭಾರತೀಯ ರೈತ ಒಕ್ಕೂಟದ ಜಿಲ್ಲಾಧ್ಯಕ್ಷ ಶಾಮನೂರು ಹೆಚ್.ಆರ್. ಲಿಂಗರಾಜ್, ಜಿ.ಪಂ. ಮಾಜಿ ಸದಸ್ಯರಾದ ಕೆ.ಎಸ್. ಬಸವಂತಪ್ಪ, ಬೇತೂರು ಕರಿಬಸಪ್ಪ, ಮಹಾಮಂಡಳ ನಿರ್ದೇಶಕರಾದ ಶಿರಮಗೊಂಡನಹಳ್ಳಿಯ ಎ.ಬಿ.ಕರಿಬಸಪ್ಪ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕರಾದ ಎ.ಎಂ.ಮಂಜುನಾಥ್, ಮಂಜಪ್ಪ, ಬೆಳಲಗೆರೆ ದೇವೇಂದ್ರಪ್ಪ, ಹೂವಿನಮಡು ಪ್ರಭು, ಬಾತಿ ವೀರೇಶ್, ಕಕ್ಕರಗೊಳ್ಳದ ಕೆ.ಜಿ. ಬಸವನಗೌಡ್ರು, ಹರಿಹರ ತಾಲ್ಲೂಕಿನ ಜಿ. ಮಂಜುನಾಥ್ ಪಟೇಲ್, ಜಿಗಳಿ ಆನಂದಪ್ಪ, ಮಲೇಬೆನ್ನೂರಿನ ಬಿ. ವೀರಯ್ಯ, ಪಿ.ಹೆಚ್. ಶಿವಕುಮಾರ್, ವಾಸನ ಮಂಜುನಾಥ್, ನಂದಿತಾವರೆ ಮುರುಗೇಂದ್ರಯ್ಯ, ಕುಂಬಳೂರು ವಾಸು, ಕೆ. ದೇವೇಂದ್ರಪ್ಪ ಸೇರಿದಂತೆ, ಇನ್ನೂ ಅನೇಕ ರೈತರು ಸಭೆಯಲ್ಲಿದ್ದರು.

# ಹಂದಿ ಹಾವಳಿ ನಿಯಂತ್ರಣಕ್ಕೆ ಆಗ್ರಹ

## ಚಿಕ್ಕ ಬೂದಿಹಾಳ್, ದೊಡ್ಡ ಬೂದಿಹಾಳ್ ಗ್ರಾಮಸ್ಥರ ಪ್ರತಿಭಟನೆ

ದಾವಣಗೆರೆ, ಜು.11- ನೆಮ್ಮದಿಗೆ ಭಂಗ ತಂದ ಹಂದಿಗಳ ಹಾವಳಿಯಿಂದ ರಕ್ಷಿಸುವಂತೆ ಒತ್ತಾಯಿಸಿ ಅಖಿಲ ಭಾರತ ಕಿಸಾನ್ ಸಭಾ ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಗರಕ್ಕೆ ಸಮೀಪದ ಚಿಕ್ಕ ಬೂದಿಹಾಳ್, ದೊಡ್ಡ ಬೂದಿಹಾಳ್ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಜಿಲ್ಲಾಡಳಿತ ಭವನದ ಎದುರು ಜಮಾಯಿಸಿದ್ದ ಗ್ರಾಮಸ್ಥರು, ನಂತರ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅವರಿಗೆ ಮನವಿ ಸಲ್ಲಿಸಿದರು.

ಸಂಘಟನೆ ಪ್ರಧಾನ ಕಾರ್ಯದರ್ಶಿ ಐರಣಿ ಚಂದ್ರು ಮಾತನಾಡಿ, ನಗರಕ್ಕೆ ಸಮೀಪದ ಹಳ್ಳಿಗಳಾದ ದೊಡ್ಡ ಬೂದಿಹಾಳ್, ಚಿಕ್ಕ ಬೂದಿಹಾಳ್, ಯರಗುಂಟೆ ಗ್ರಾಮಗಳಲ್ಲಿ ರೈತರು ಹಂದಿಗಳ ಹಾವಳಿಯಿಂದ ಭತ್ತ, ಮೆಕ್ಕೆಜೋಳ ಇತರೆ ಬೆಳೆಗಳನ್ನು ಉಳಿಸಿಕೊಳ್ಳಲು ಹಗಲಿರುಳು ಕಾಯುವ ದುಸ್ಥಿತಿ ನಿರ್ಮಾಣವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮೊನ್ನೆಯಷ್ಟೇ ಭತ್ತದ ಸಸಿ ಬೀಜಗಳನ್ನು ದೊಡ್ಡ ಬೂದಿಹಾಳ್ ಗ್ರಾಮದ ಸತ್ತೂರು ರೇವಣಸಿದ್ದಪ್ಪ ಎಂಬುವರು 30 ಸಾವಿರ ಖರ್ಚು ಮಾಡಿ, ಸಸಿ ಮಡಿ ಮಾಡಿದ್ದರು. ಚಿಕ್ಕ ಬೂದಿಹಾಳ್‌ನ ಜಂಗಪ್ಪರ ಸುರೇಶ 12 ಸಾವಿರ ರೂ. ಖರ್ಚು ಮಾಡಿ ಭತ್ತದ ಸಸಿ ಮಾಡಿಸಿದ್ದರು. ಆ ಮಡಿಗಳನ್ನೇ ಹಂದಿಗಳ ಹಿಂಡು ನಾಶ ಮಾಡಿವೆ ಎಂದು ದೂರಿದರು.

ಮೊದಲೇ ಬೆಳೆದ ಬೆಳೆಗಳಿಗೆ ಬೆಲೆ ಸಿಗದೇ ಕಂಗಾಲಾಗಿರುವ ರೈತರು ಮತ್ತಷ್ಟು ಆತಂಕ, ಅಪಾಯ, ಅನಾಹುತಕ್ಕೆ ಸಿಲುಕುವಂತಹ ದುಸ್ಥಿತಿಗೆ ಹಂದಿ ಮಾಲೀಕರು ಕಾರಣರಾಗಿದ್ದಾರೆ. ತಕ್ಷಣವೇ ಹಂದಿ ಮಾಲೀಕರ ಸಭೆಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲೇ ಕರೆದು, ನಮ್ಮ ಊರುಗಳು, ನಮ್ಮ ರೈತರು, ನಮ್ಮ ಬೆಳೆಗಳನ್ನು ಹಂದಿಗಳಿಂದ ರಕ್ಷಣೆ ಮಾಡಬೇಕು. ಈ ಬಗ್ಗೆ ತಕ್ಷಣವೇ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪತ್ರಿಭಟನೆಯಲ್ಲಿ ಗ್ರಾಮಸ್ಥರಾದ ಕೆ.ಹೆಚ್. ಹನುಮಂತಪ್ಪ, ಐ.ಎಂ. ಅಣ್ಣಪ್ಪ ಸ್ವಾಮಿ, ವೈ.ಎಲ್. ಬಸವರಾಜಪ್ಪ, ಮಂಜುನಾಥ, ದೇವೇಂದ್ರಾಚಾರ್, ಉದಯಕುಮಾರ, ಎಂ. ಮಾರುತಿ, ಆರ್.ಆರ್. ಹನುಮಂತಪ್ಪ, ಬಿ. ಸಿದ್ದಪ್ಪ, ಐ.ಆರ್. ಪ್ರಜ್ವಲ್, ರುದ್ರಪ್ಪ, ಎಸ್.ಎನ್. ತಿಪ್ಪೇಶ್, ಟಿ. ವೀರಭದ್ರಪ್ಪ, ಸುರೇಶ, ಕೆ.ಬಿ. ರವೀಂದ್ರ, ಎಸ್. ರುದ್ರಪ್ಪ ಸೇರಿದಂತೆ, ಇತರರು ಪಾಲ್ಗೊಂಡಿದ್ದರು.

# 17 ರಂದು ಕುರುಬರ ಸಂಸ್ಕೃತಿ ದರ್ಶನ ಮಾಲಿಕೆಯ 13 ಗ್ರಂಥಗಳ ಲೋಕಾರ್ಪಣೆ

ದಾವಣಗೆರೆ, ಜು. 11- ಕುರುಬರ ಸಾಂಸ್ಕೃತಿಕ ಪರಿಷತ್ತು ಬೆಂಗಳೂರು ಹಾಗೂ ದಾವಣಗೆರೆ ಜಿಲ್ಲಾ ಕುರುಬ ಸಮಾಜದ ಎಲ್ಲಾ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಇದೇ ದಿನಾಂಕ 17 ರಂದು ಸಂಜೆ 3 ಗಂಟೆಗೆ ನಗರದ ಕುವೆಂಪು ಕನ್ನಡ ಭವನದಲ್ಲಿ ಕುರುಬರ ಸಂಸ್ಕೃತಿ ದರ್ಶನ ಮಾಲಿಕೆಯ ಹದಿಮೂರು ಗ್ರಂಥಗಳ ಲೋಕಾರ್ಪಣೆ ಕಾರ್ಯಕ್ರಮ ನಡೆಯಲಿದೆ ಎಂದು ಪರಿಷತ್ತಿನ ಅಧ್ಯಕ್ಷರೂ, ಮಾಜಿ ಸಚಿವರೂ ಆದ ಹೆಚ್.ಎಂ. ರೇವಣ್ಣ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ತಮ್ಮ ಅಧ್ಯಕ್ಷತೆಯಲ್ಲಿ ಮತ್ತು ಬಿಳಿಚೋಡು ಕುಲಗುರುಗಳಾದ ಡಾ. ಉದಯಶಂಕರ ಒಡೆಯರ್, ಮತ್ತೊಬ್ಬ ಕುಲಗುರುಗಳೂ, ಸಾಹಿತಿಗಳಾದ ಡಾ. ನಾ. ಲೋಕೇಶ್ ಒಡೆಯರ್, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷರೂ, ಜಿ.ಪಂ. ಮಾಜಿ ಅಧ್ಯಕ್ಷರೂ ಆದ ಜಿ. ದ್ಯಾಮಪ್ಪ ಅವರ ಉಪಸ್ಥಿತಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಹರಿಹರದ ಶಾಸಕ ಎಸ್. ರಾಮಪ್ಪ ಗ್ರಂಥಗಳನ್ನೂ ಅನಾವರಣ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ನಿವೃತ್ತ ಪ್ರಾಚಾರ್ಯರು, ಜಾನಪದ ತಜ್ಞ ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ, ನಿವೃತ್ತ ಪ್ರಾಧ್ಯಾಪಕರೂ, ಸಂಸ್ಕೃತಿ ಚಿಂತಕ ಡಾ. ಎ.ಬಿ. ರಾಮಚಂದ್ರಪ್ಪ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ. ದಾದಾಪೀರ್ ನವಿಲೇಹಾಳ್, ಯೋಜನಾ ನಿರ್ದೇಶಕ ಕಾ.ತ. ಚಿಕ್ಕಣ್ಣ ಮತ್ತಿತರೆ ಗಣ್ಯರು ಭಾಗವಹಿಸಲಿದ್ದಾರೆ. ಅಸಗೋಡು ರೇವಣಸಿದ್ಧಪ್ಪ ಮತ್ತು ಸಂಗಡಿಗರಿಂದ ಸುಗಮ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಪುರಾಣ, ಇತಿಹಾಸ, ಧರ್ಮ, ಸಾಹಿತ್ಯ, ಕಲೆ ಮತ್ತು ಕ್ರೀಡೆ, ಮಹಿಳೆ, ಸಮಾಜೋ-ಆರ್ಥಿಕ, ಆಧುನಿಕತೆ, ಚಿತ್ರಕೋಶ, ಸಾಂಸ್ಕೃತಿಕ ಪದಕೋಶಗಳನ್ನು ಒಳಗೊಂಡಂತೆ ಗ್ರಂಥಗಳು ರಚನೆಯಾಗಿವೆ ಎಂದು ರೇವಣ್ಣ ಅವರು ಹೇಳಿದರು.

ಪರಿಷತ್ತಿನ ವತಿಯಿಂದ ಸಮಾಜದ ಮಹಿಳೆಯರ ಸಂಘಟನೆಗಾಗಿ ಬೀದರ್, ತುಮಕೂರು, ಬೆಂಗಳೂರು ಮತ್ತು ಕೋಲಾರದಲ್ಲಿ ನಾಲ್ಕು ಕಮ್ಮಟಗಳನ್ನು ಆಯೋಜಿಸಲಾಗಿತ್ತು. ಕುರುಬ ಸಮಾಜದ 180 ಪಿಹೆಚ್‌ಡಿ ಪದವೀಧರರನ್ನು ಗುರುತಿಸಿದ್ದು, ಅವರಿಗೂ ಕಮ್ಮಟ ಏರ್ಪಡಿಸಲಾಗಿತ್ತು ಎಂದು ಅವರು ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಮುಖಂಡರುಗಳಾದ ಬಿ.ಎಂ. ಸತೀಶ್, ಡಾ. ಹೆಚ್. ಯಲ್ಲಪ್ಪ, ಪಿ. ರಾಜಕುಮಾರ್, ಎಸ್.ಎಸ್. ಗಿರೀಶ್, ಜಯಣ್ಣ, ಇಟ್ಟಿಗುಡಿ ಮಂಜುನಾಥ್, ಹಾಲೇಕಲ್ ಎಸ್.ಟಿ. ಅರವಿಂದ್, ಬಿ. ಲಿಂಗರಾಜ್, ರೇವಣ್ಣ ಕನ್ನವರ, ಕರಿಬಸಯ್ಯ ಗೋಣಿಮಠ, ಎಂ.ಹೆಚ್. ಶ್ರೀನಿವಾಸ್ , ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

# ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ಪ್ರತಿಭಟನೆ

**(6ನೇ ಪುಟದಿಂದ)** ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ 15 ದಿನಗಳಲ್ಲಿ ಮೀಸಲಾತಿ ಹೆಚ್ಚಿಸುವುದಾಗಿ ಭರವಸೆ ನೀಡಿದ್ದರು. ಆದರೆ, ಬಳಿಕ ಭರವಸೆ ಈಡೇರಿಸದೇ ಎಸ್ಸಿ-ಎಸ್ಟಿ ಸಮುದಾಯಗಳಿಗೆ ಅನ್ಯಾಯ ಮಾಡಿದ್ದಾರೆ. ಬಿಜೆಪಿ ನೇತೃತ್ವದ ಸರ್ಕಾರ ಪರಿಶಿಷ್ಟರ ಬೇಡಿಕೆ ಈಡೇರಿಸಲು ಹೀಗೆ ವಿಳಂಬ, ನಿರ್ಲಕ್ಷ್ಯ, ಉದ್ಧಟತನ ತೋರಿಸಿದರೆ, ಬರುವ ಚುನಾವಣೆಯಲ್ಲಿ ಬಿಜೆಪಿಯನ್ನು ಅಧಿಕಾರದಿಂದ ಕಿತ್ತೊಗೆಯಬೇಕಾಗುತ್ತದೆ ಎಂದರು.

ಹರಿಹರ ಶಾಸಕ ಎಸ್. ರಾಮಪ್ಪ, ವಿಧಾನ ಪರಿಷತ್ ಸದಸ್ಯ ಕೆ. ಅಬ್ದುಲ್ ಜಬ್ಬಾರ್, ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಬಿ. ವೀರಣ್ಣ, ಒಕ್ಕೂಟದ ಸಂಚಾಲಕ ಹೊದಿಗೆರೆ ರಮೇಶ್, ಮುಖಂಡ ಹೆಚ್.ಎಸ್. ನಾಗರಾಜ್ ಮತ್ತಿತರರು ಮಾತನಾಡಿ, ಸರ್ಕಾರದ ವರ್ತನೆಯನ್ನು ಖಂಡಿಸಿದರು.

ಜಗಳೂರು ಶಾಸಕ ಎಸ್.ವಿ. ರಾಮಚಂದ್ರ ಅವರ ಧರ್ಮಪತ್ನಿ ಶ್ರೀಮತಿ ಇಂದಿರಾ ರಾಮಚಂದ್ರ, ತಾಲ್ಲೂಕು ನಾಯಕ ಸಮಾಜದ ಅಧ್ಯಕ್ಷ ಹದಡಿ ಹಾಲಪ್ಪ, ಮಹಿಳಾ ವಾಲ್ಮೀಕಿ ಸಮಾಜದ ಅಧ್ಯಕ್ಷ ವಿಜಯಲಕ್ಷ್ಮಿ, ಒಕ್ಕೂಟದ ಮುಖಂಡರುಗಳಾದ ಕೆ.ಪಿ. ಪಾಲಯ್ಯ, ಡಾ. ಎ.ಬಿ. ರಾಮಚಂದ್ರಪ್ಪ, ಎನ್.ಎಂ. ಆಂಜನೇಯ ಗುರೂಜಿ, ಶ್ರೀನಿವಾಸ್ ದಾಸಕರಿಯಪ್ಪ, ಶ್ಯಾಗಲೆ ಮಂಜುನಾಥ್, ಹುಚ್ಚವ್ವನಹಳ್ಳಿ ಮಂಜುನಾಥ, ಸೋಮಲಾಪುರದ ಹನುಮಂತಪ್ಪ, ಆವರಗೆರೆ ವಾಸು, ಫಣಿಯಾಪುರ ಲಿಂಗರಾಜ್, ರಾಘವೇಂದ್ರ ಪಾಟೀಲ್, ಪ್ರವೀಣ್ ಶ್ಯಾಮನೂರು, ಹೆಗ್ಗೆರೆ ರಂಗಪ್ಪ, ನವೀನ್, ತಿಮ್ಮಣ್ಣ, ಕರೂರು ಹನುಮಂತಪ್ಪ, ಚೌಡಪ್ಪ, ನಾಗರಾಜ, ಜಯಣ್ಣ, ನಂಜಾ ನಾಯ್ಕ ಸೇರಿದಂತೆ ಇತರರು ಭಾಗವಹಿಸಿದ್ದರು.

# ನೂತನ ಸಂಸತ್ ಭವನದ ಮೇಲೆ ರಾಷ್ಟ್ರ ಲಾಂಛನ ಅನಾವರಣ



ನವದೆಹಲಿ, ಜ. 11 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸೋಮವಾರ ನೂತನ ಸಂಸತ್ ಭವನದ ಮೇಲೆ ರಾಷ್ಟ್ರ ಲಾಂಛನವನ್ನು ಅನಾವರಣಗೊಳಿಸಿದ್ದಾರೆ. ಈ ವರ್ಷದಲ್ಲಿ ನೂತನ ಭವನ ಉದ್ಘಾಟನೆಯಾಗಲಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಪ್ರಧಾನಿ ಮೋದಿ, ನೂತನ ಸಂಸತ್ ಭವನದ ಮೇಲೆ ರಾಷ್ಟ್ರ ಲಾಂಛನ ಅನಾವರಣಗೊಳಿಸಿರುವುದು ಗೌರವ ತಂದಿದೆ ಎಂದಿದ್ದಾರೆ.

ಸಂಸತ್ತಿನ ಚಳಿಗಾಲದ ಅಧಿವೇಶನ ನೂತನ ಸಂಸತ್ ಭವನದಲ್ಲಿ ನಡೆಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೋದಿ ಅವರ ಜೊತೆ ಲೋಕಸಭಾಧ್ಯಕ್ಷ ಓಂ ಬಿರ್ಲಾ, ರಾಜ್ಯಸಭಾ ಉಪಾಧ್ಯಕ್ಷ ಹರಿವಂಶ್ ಹಾಗೂ ನಗರಾಭಿವೃದ್ಧಿ ಸಚಿವ ಹರ್‌ದೀಪ್ ಸಿಂಗ್ ಪುರಿ ಅವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಪೂಜೆಯನ್ನೂ ಕೈಗೊಳ್ಳಲಾಯಿತು.

ಕಟ್ಟಡ ನಿರ್ಮಾಣದಲ್ಲಿ ಭಾಗಿಯಾದ ಶ್ರಮಜೀವಿಗಳ ಜೊತೆ ಸಂವಾದ ನಡೆಸಿದ ಪ್ರಧಾನಿ ಮೋದಿ ಅವರು, ಶ್ರಮಜೀವಿಗಳು ದೇಶಕ್ಕೆ ನೀಡುತ್ತಿರುವ ಕೊಡುಗೆ ಬಗ್ಗೆ ನಮಗೆ ಹೆಮ್ಮೆ ಇದೆ ಎಂದು ತಿಳಿಸಿದ್ದಾರೆ.

ಪ್ರಧಾನಿ ಮೋದಿ ಅವರು 6.5 ಮೀಟರ್ ಎತ್ತರದ ರಾಷ್ಟ್ರ ಚಿಹ್ನೆಯನ್ನು ಅನಾವರಣಗೊಳಿಸಿದ್ದಾರೆ. ಕಂಚಿನಿಂದ ಇದನ್ನು ನಿರ್ಮಿಸಲಾಗಿದ್ದು, 9,500 ಕೆ.ಜಿ. ತೂಕದ್ದಾಗಿದೆ. ಇದರ ಸುತ್ತ 6,500 ಕೆಜಿ ತೂಕದ ಉಕ್ಕಿನ ಆಧಾರವನ್ನು ರೂಪಿಸಲಾಗಿದೆ.

## ಪ್ರಧಾನಿ ಮಂತ್ರಿ ನರೇಂದ್ರ ಮೋದಿಯಿಂದ ರಾಷ್ಟ್ರ ಲಾಂಛನ ಅನಾವರಣಕ್ಕೆ ಪ್ರತಿಪಕ್ಷಗಳ ಆಕ್ಷೇಪ

ನವದೆಹಲಿ, ಜು. 11 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸಂಸತ್ ಕಟ್ಟಡದ ಮೇಲೆ ರಾಷ್ಟ್ರ ಲಾಂಛನ ಅನಾವರಣಗೊಳಿಸಿರುವುದನ್ನು ಪ್ರತಿಪಕ್ಷಗಳು ತರಾಟೆಗೆ ತೆಗೆದುಕೊಂಡಿದ್ದು, ಇದು ಸಂವಿಧಾನದ ಅಧಿಕಾರ ಪ್ರತ್ಯೇಕಿಸುವ ತತ್ವವನ್ನು ಉಲ್ಲಂಘಿಸಿದಂತೆ ಎಂದಿವೆ.

ಸಂವಿಧಾನ, ಸಂಸತ್ತು, ಸರ್ಕಾರ ಹಾಗೂ ನ್ಯಾಯಾಂಗದ ಅಧಿಕಾರ ವಿಭಜಿಸುತ್ತದೆ. ಸರ್ಕಾರದ ಮುಖ್ಯಸ್ಥರಾಗಿ ಪ್ರಧಾನ ಮಂತ್ರಿ ನೂತನ ಸಂಸತ್ ಕಟ್ಟಡದ ರಾಷ್ಟ್ರ ಲಾಂಛನ ಅನಾವರಣಗೊಳಿಸಬಾರದಿತ್ತು ಎಂದು ಎಐಎಂಐಎಂ ಮತ್ತು ಸಿಪಿಐ (ಎಂ) ಪಕ್ಷಗಳು ಹೇಳಿಕೆ ನೀಡಿವೆ.

ಈ ಸಮಾರಂಭದಿಂದ ಪ್ರತಿಪಕ್ಷಗಳನ್ನು ದೂರವಿಟ್ಟಿರುವ ಬಗ್ಗೆ ಎನ್.ಸಿ.ಪಿ. ನಾಯಕ ಮಜೀದ್ ಮೆಮೊನ್ ಆಕ್ಷೇಪಿಸಿದ್ದಾರೆ.

## ರಾಷ್ಟ್ರ ಲಾಂಛನ ಅನಾವರಣದ ವೇಳೆ ಪೂಜೆಗೆ ಆಕ್ಷೇಪ

ನವದೆಹಲಿ, ಜು. 11 – ನೂತನ ಸಂಸತ್ ಆವರಣದಲ್ಲಿ ರಾಷ್ಟ್ರೀಯ ಲಾಂಛನ ಅನಾ ವರಣ ಗೊಳಿಸುವ ವೇಳೆ ಪೂಜಾ ಸಮಾರಂಭ ನಡೆಸಿದ್ದಕ್ಕೆ ಎಡಪಕ್ಷಗಳು ಆಕ್ಷೇಪಿಸಿವೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನೂತನ ಸಂಸತ್ ಕಟ್ಟಡದ ಮೇಲೆ ಸ್ಥಾಪಿಸಲಾಗಿರುವ ರಾಷ್ಟ್ರ ಲಾಂಛನವನ್ನು ಅನಾವರಣಗೊಳಿಸಿದರು. ಇದು 6,500 ಕೆ.ಜಿ. ತೂಕದ ಬೃಹತ್ ವಿನ್ಯಾಸವಾಗಿದೆ.

ರಾಷ್ಟ್ರ ಲಾಂಛನವನ್ನು ಯಾವುದೇ ಧಾರ್ಮಿಕ ಸಮಾರಂಭದ ಜೊತೆ ಜೋಡಣೆ ಮಾಡಬಾರದು.

ಇದು ಎಲ್ಲರಿಗೂ ಸೇರಿದ ಲಾಂಛನವಾಗಿದೆ. ಇದರಿಂದ ಧರ್ಮವನ್ನು ಪ್ರತ್ಯೇಕವಾಗಿರಿಸಬೇಕು ಎಂದು ಸಿಪಿಐ (ಎಂ) ಹೇಳಿಕೆ ನೀಡಿದೆ.

ಇದು ಖಾಸಗಿ ಇಲ್ಲವೇ ವೈಯಕ್ತಿಕ ಸಮಾರಂಭವಲ್ಲ. ಸಂಸತ್ತು ತಟಸ್ಥವಾಗಿದೆ. ಅಲ್ಲಿ ಧಾರ್ಮಿಕ ಸಮಾರಂಭಗಳನ್ನು ತರಬಾರದು ಎಂದು ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜಾ ಹೇಳಿದ್ದಾರೆ.

# ನನಗೊಂದು, ಕುಟುಂಬಕ್ಕೊಂದು

**(3ನೇ ಪುಟದಿಂದ)** ಮಹಾದೇವಪ್ಪ, ಸತೀಶ್ ಜಾರಕಿಹೊಳಿ, ಆರ್.ವಿ. ದೇಶಪಾಂಡೆ, ಟಿ.ಬಿ.ಜಯಚಂದ್ರ ಸೇರಿದಂತೆ ಹಲ ನಾಯಕರು ಹೀಗೆ ದುಂಬಾಲು ಬಿದ್ದವರಲ್ಲಿ ಪ್ರಮುಖರು.

ಮಾಜಿ ಸಚಿವ ಮಹಾದೇವಪ್ಪ ಅವರು ಏಕಕಾಲಕ್ಕೆ ಟಿ.ನರಸೀಪುರ ಹಾಗೂ ನಂಜನಗೂಡು ವಿಧಾನಸಭಾ ಕ್ಷೇತ್ರಗಳನ್ನು ತಮಗೆ ಬಿಟ್ಟುಕೊಡಬೇಕು ಎಂದು ಕೇಳಿದ್ದಾರೆ. ಒಂದರಲ್ಲಿ ತಾವು, ಮತ್ತೊಂದರಲ್ಲಿ ಪುತ್ರ ಸುನೀಲ್ ಭೋಸ್ ಸ್ಪರ್ಧಿಸುವುದಾಗಿ ಅವರು ಹೇಳಿದ್ದಾರೆ.

ಮಾಜಿ ಸಚಿವ ಸತೀಶ್ ಜಾರಕಿ ಹೊಳಿ ಅವರು ತಾವು ಸ್ಪರ್ಧಿಸುತ್ತಿರುವ ಯಮಕನಮರಡಿ ಕ್ಷೇತ್ರವನ್ನು ತಮ್ಮ ಪುತ್ರಿ ಪ್ರಿಯಾಂಕ ಅವರಿಗೆ ಬಿಟ್ಟುಕೊಟ್ಟು ತಾವು ಸವದತ್ತಿ ಕ್ಷೇತ್ರದಲ್ಲಿ ಸ್ಪರ್ಧಿಸಲು ಬಯಸಿದ್ದಾರೆ. ನಾನು ಯಮಕನಮರಡಿ ಕ್ಷೇತ್ರದಲ್ಲಿ ಗೆಲ್ಲುವುದು ಸಹಜ. ಆದರೆ ಸವದತ್ತಿ ಕ್ಷೇತ್ರದಲ್ಲಿ ಪಕ್ಷ ಗೆಲ್ಲಬೇಕು ಎಂದರೆ ನಾನೇ ಹೋಗಿ ಸ್ಪರ್ಧಿಸಬೇಕು.

ಸವದತ್ತಿ ಕ್ಷೇತ್ರದಲ್ಲಿ ಸ್ಪರ್ಧಿಸಲು ಟಿಕೆಟ್ ಕೊಡಿ. ಯಮಕನಮರಡಿ ವಿಧಾನಸಭಾ ಕ್ಷೇತ್ರದಲ್ಲಿ ನನ್ನ ಮಗಳಿಗೆ ಟಿಕೆಟ್ ಕೊಡಿ ಎಂದು ಜಾರಕಿಹೊಳಿ ವರಿಷ್ಠರಿಗೆ ಪಟ್ಟು ಹಿಡಿದಿದ್ದಾರೆ.

ಮಾಜಿ ಸಚಿವ ಆರ್.ವಿ. ದೇಶಪಾಂಡೆ ಅವರು ತಮಗೆ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ, ನನ್ನ ಪುತ್ರ ಪ್ರಶಾಂತ್ ದೇಶಪಾಂಡೆಗೆ ಯಲ್ಲಾಪುರ ಕ್ಷೇತ್ರದ ಟಿಕೆಟ್ ನೀಡುವಂತೆ ನಾಯಕರಲ್ಲಿ ಮನವಿ ಮಾಡಿದ್ದಾರೆ.

ಮಾಜಿ ಸಚಿವ ಟಿ.ಬಿ.ಜಯಚಂದ್ರ ಅವರು ತಮಗೆ ತುಮಕೂರು ಜಿಲ್ಲೆಯ ಶಿರಾ ಕ್ಷೇತ್ರದಲ್ಲಿ ಟಿಕೆಟ್ ನೀಡುವುದರ ಜತೆಗೆ, ಚಿಕ್ಕನಾಯಕನಹಳ್ಳಿ ಕ್ಷೇತ್ರದಿಂದ ತಮ್ಮ ಪುತ್ರ ಸಂತೋಷ್ ಅವರಿಗೆ ಟಿಕೆಟ್ ನೀಡುವಂತೆ ಪಟ್ಟು ಹಿಡಿದಿದ್ದಾರೆ.

ಈ ಮಧ್ಯೆ ಬೆಳಗಾವಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಅಥಣಿ ಕ್ಷೇತ್ರದಿಂದ ತಮ್ಮ ಪುತ್ರನಿಗೆ ಟಿಕೆಟ್ ನೀಡುವಂತೆ ಲಾಬಿ ಮಾಡುತ್ತಿದ್ದಾರೆ.

ಮೂಡಿಗೆರೆ ಕ್ಷೇತ್ರದಲ್ಲಿ ತಮ್ಮ ಬದಲಿಗೆ ಪುತ್ರಿ ನಯನಾ ಅವರಿಗೆ ಟಿಕೆಟ್ ನೀಡುವಂತೆ ವರಿಷ್ಠರನ್ನು ಕೋರಿದ್ದಾರೆ. ಹೀಗೆ ಕಾಂಗ್ರೆಸ್‌ನಲ್ಲಿ ದೊಡ್ಡ ಪಟ್ಟಿಯೇ ಬೆಳೆದಿದೆ. ಹಲ ನಾಯಕರು ತಮ್ಮ ಜತೆಗೆ ತಮ್ಮ ಮಗ, ಇಲ್ಲವೇ ಮಗಳಿಗೆ ಟಿಕೆಟ್ ನೀಡಬೇಕು ಎಂದೋ, ತಮ್ಮ ಬದಲಿಗೆ ತಮ್ಮ ಮಕ್ಕಳಿಗೆ ಟಿಕೆಟ್ ನೀಡುವಂತೆ ಪಟ್ಟು ಹಿಡಿದಿದ್ದು, ಆ ಮೂಲಕ ಟಿಕೆಟ್ ರಾಜಕೀಯ ದಿನ ದಿನಕ್ಕೂ ಬಿರುಸು ಪಡೆಯುತ್ತಿದೆ.

## ನ್ಯಾಷನಲ್ ಹೆರಾಲ್ಡ್ : ಜುಲೈ 21ರಂದು ಸೋನಿಯಾ ವಿಚಾರಣೆ

ನವದೆಹಲಿ, ಜು. 11 - ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಜುಲೈ 21ರಂದು ವಿಚಾರಣೆಗೆ ಬರುವಂತೆ ಜಾರಿ ನಿರ್ದೇಶನಾಲಯ ತಿಳಿಸಿದೆ. ಜೂನ್ 23ರಂದು ಅವರಿಗೆ ಸಮನ್ಸ್ ಕಳಿಸಲಾಗಿತ್ತು. ಆದರೆ, ಕೊರೊನಾ ಸೋಂಕು ಹಾಗೂ ಶ್ವಾಸಕೋಶ ಸೋಂಕಿನ ಕಾರಣದಿಂದಾಗಿ ಅಂದು ಹಾಜರಾಗಲು ಸಾಧ್ಯವಾಗಿರಲಿಲ್ಲ.

# ಮಾನವೀಯ ಸಂಬಂಧಗಳು ಸಡಿಲಗೊಳ್ಳದಿರಲಿ



**(6ನೇ ಪುಟದಿಂದ)** ಮಳಲಿ ಮಠದ ಶ್ರೀ ನಾಗಭೂಷಣ ಶಿವಾಚಾರ್ಯ ಸ್ವಾಮೀಜಿ ಪ್ರಾಸ್ತಾವಿಕವಾಗಿ ಮಾತನಾಡಿ, ಮನಸ್ಸು, ಬುದ್ಧಿ ಮತ್ತು ಸದ್ವಿಚಾರಗಳು ಬೆಳೆದಾಗ ಜೀವನದಲ್ಲಿ ಶ್ರೇಯಸ್ಸು ಕಟ್ಟಿಟ್ಟ ಬುತ್ತಿ ಎಂದರು.

ಹರಪನಹಳ್ಳಿ ತೆಗ್ಗಿನಮಠದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಯುವ ಜನಾಂಗದಲ್ಲಿ ಅದ್ಭುತ ಶಕ್ತಿಯಿದೆ. ಆಲಸ್ಯ ಮತ್ತು ದುರ್ವ್ಯಸನಗಳಿಂದ ಮುಕ್ತರಾಗಿ ಬಾಳಿದಾಗ ಅಭ್ಯುದಯ ಕಾಣಲು ಸಾಧ್ಯವಾಗುವುದೆಂದರು.

ಕೋಡಿಯಾಲ ಹೊಸಪೇಟೆ ಪುಣ್ಯಕೋಟಿ ಮಠದ ಜಗದೀಶ್ವರ ಸ್ವಾಮಿಗಳು ಉಪಸ್ಥಿತರಿದ್ದರು.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಎಸ್.ಎ.ಮುರುಗೇಶ್, ದೇವಸ್ಥಾನ ಸಮಿತಿ ಕಾರ್ಯಾಧ್ಯಕ್ಷ ಜುಂಜಪ್ಪ ಹೆಗ್ಗಪ್ಪನವರ ಉಪಸ್ಥಿತರಿದ್ದರು.

ಹಲವಾರು ಗಣ್ಯರಿಗೆ ಮತ್ತು ದಾನಿಗಳಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಗುರು ರಕ್ಷೆಯಿತ್ತು ಶುಭ ಹಾರೈಸಿದರು. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ರ್‍ಯಾಂಕ್ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಿ ಶ್ರೀ ರಂಭಾಪುರಿ ಜಗದ್ಗುರುಗಳು ಆಶೀರ್ವದಿಸಿದರು.

ಕಾಂತರಾಜ ಮತ್ತು ವೀರೇಶ ಇವರಿಂದ ಸಂಗೀತ ಸೌರಭ ಜರುಗಿತು. ಕೊಂಡಜ್ಜಿ ಪಂಚಾಕ್ಷರಿ ಸ್ವಾಗತಿಸಿದರು. ರತ್ನ ಸಾಲಿಮಠ, ಎ.ಎಂ.ರಾಜಶೇಖರ ನಿರೂಪಿಸಿದರು. ಹರಿಹರದ ಕೊಂಡಜ್ಜಿ ಈಶ್ವರಪ್ಪ ಮತ್ತು ಮಕ್ಕಳು ಹಾಗೂ ಕೋಡಿಯಾಲ ಹೊಸಪೇಟೆ ಸುಜಾತ ಗಿರೀಶ್ ಹೆಗ್ಗಪ್ಪನವರು ಪ್ರಸಾದ ಸೇವೆ ಸಲ್ಲಿಸಿದರು.

# ಸೇವಾದಳ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಪಲ್ಲಾಗಟ್ಟೆ

**(6ನೇ ಪುಟದಿಂದ)** ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಚನ್ನಪ್ಪ ಪಲ್ಲಾಗಟ್ಟೆ ಅವಿರೋಧವಾಗಿ ಆಯ್ಕೆಯಾದರು.

ಚನ್ನಪ್ಪ ಅವರನ್ನು ಅರವಿಂದ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಪ್ರೊ. ಕೆ.ಆರ್. ಸಿದ್ದಪ್ಪ, ಉಪಾಧ್ಯಕ್ಷರಾದ ಆಲೂರು ವಿಜಯಕುಮಾರ್, ಕಾರ್ಯದರ್ಶಿ ಅರವಿಂದ ಜೆ. ಕೂಲಂಬಿ, ಕೋಶಾಧ್ಯಕ್ಷ ಎಂ. ರುದ್ರಯ್ಯ ಹೊನ್ನಾಳಿ, ವಕೀಲರಾದ ಮತ್ತಿ ಯು. ಹನುಮಂತಪ್ಪ, ಎಸ್.ಟಿ. ಕುಸುಮಶ್ರೇಷ್ಠಿ, ರಮಣ್ ಲಾಲ್ ಸಂಘವಿ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ಅಭಿನಂದಿಸಿದ್ದಾರೆ.

# ನಕಲಿ ಬಂಗಾರ ಮಾರಾಟ : 6 ಮಂದಿ ಬಂಧನ, 252 ಗ್ರಾಂ ನಕಲಿ ಬಂಗಾರ ವಶ

ದಾವಣಗೆರೆ, ಜೂ.11- ನಕಲಿ ಬಂಗಾರ ಮಾರಾಟ ಮಾಡುತ್ತಿದ್ದ ಆರು ಮಂದಿಯನ್ನು ಬಂಧಿಸಿರುವ ಸಿಇಎನ್ ಅಪರಾಧ ಪೊಲೀಸರು 252 ಗ್ರಾಂ ನಕಲಿ ಬಂಗಾರ ವಶಪಡಿಸಿಕೊಂಡಿದ್ದಾರೆ.

ಕೆ. ಧರ್ಮಪ್ಪ, ಕೆ. ರಸಿಕ, ಎಂ. ಹನುಮಂತಪ್ಪ , ಎಂ. ರುದ್ರಪ್ಪ ಸಣ್ಣ ಸುಂಕಪ್ಪ, ಎಂ. ಸಂಜೀವ, ಕರ್ಣ ಬಂಧಿತರು. ಪಾಯ ತೆಗೆಯುವಾಗ ಬಂಗಾರದ ಬಿಲ್ಲೆಗಳು ಸಿಕ್ಕಿದ್ದು, ಅವುಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡುವುದಾಗಿ ಇದೇ ಜೂ.10ರಂದು ಅರುಣ್ ಕುಮಾರ್ ಅವರಿಗೆ ಬಂಧಿತರು ನಂಬಿಸಿ, ಅವರನ್ನು ಬಾತಿ ಗ್ರಾಮದ ಹತ್ತಿರ ಇರುವ ಗೂಡ್ ಶೆಡ್ ಬಳಿ ಮಧ್ಯಾಹ್ನ ಕರೆಸಿಕೊಂಡಿದ್ದಾರೆ. ಮೊದಲಿಗೆ ಒಂದು ಬಿಲ್ಲೆಯನ್ನು ನೀಡಿ ಇದನ್ನು ಪರೀಕ್ಷೆ ಮಾಡಿಸಿಕೊಂಡು ಬರುವಂತೆ ತಿಳಿಸಿದ್ದಾರೆ.

ಅರುಣ್ ಕುಮಾರ್ ಅವರು ಸಾಮಾಜಿಕ ಜಾಲ ತಾಣಗಳಲ್ಲಿ ಈ ರೀತಿಯಾಗಿ ಮೋಸ ಮಾಡುವ ಜಾಲ ಇದೆ ಎಂಬುದನ್ನು ತಿಳಿದು, ಬಾತಿಯಲ್ಲಿ ತಮಗೆ ಪರಿಚಯವಿದ್ದ ಪೊಲೀಸ್ ಓರ್ವರಿಗೆ ಮಾಹಿತಿ ನೀಡಿದ್ದಾರೆ. ಈ ವಿಚಾರ ತಿಳಿಯುತ್ತಿದ್ದಂತೆ ಡಿಸಿಆರ್ ಬಿ ಘಟಕದ ಪೊಲೀಸ್ ಉಪಾಧೀಕ್ಷಕ ಬಿ.ಎಸ್. ಬಸವರಾಜ್ ಮತ್ತು ಸಿಬ್ಬಂದಿಗಳಾದ ಅಶೋಕ, ಮಜೀದ್, ಆಂಜನೇಯ, ಸುರೇಶ, ಬಾಲಾಜಿ, ಮಾರುತಿ ಒಳಗೊಂಡ ತಂಡ ಕಾರ್ಯಾಚರಣೆ ನಡೆಸಿದೆ. ಈ ವೇಳೆ ಆರೋಪಿತರಿಂದ 252 ಗ್ರಾಂ ನಕಲಿ ಬಂಗಾರದ ಬಿಲ್ಲೆಗಳು ಮತ್ತು ಕೃತ್ಯಕ್ಕೆ ಬಳಸಿದ ಒಂದು ಮೊಬೈಲ್, 500 ರೂ. ನಗದು ಹಣ ಮತ್ತು ಅಸಲಿ ಬಂಗಾರದ ಒಂದು ಬಿಲ್ಲೆಯನ್ನು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಬಂಧಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

**ವಂಚನೆಯಿಂದ ಸುರಕ್ಷಿತರಾಗಿರಿ :** ಪಾಯ ತಗೆಯುವಾಗ ಬಂಗಾರದ ಬಿಲ್ಲೆಗಳು, ಬಂಗಾರ ಸಿಕ್ಕಿದೆ ಎಂದು ಯಾರಾದರೂ ನಿಮಗೆ ತಿಳಿಸಿದರೆ ಕೂಡಲೇ ಸ್ಥಳೀಯ ಪೊಲೀಸರ ಗಮನಕ್ಕೆ ತನ್ನಿ. ತುರ್ತು ಸಹಾಯವಾಣಿ 112ಕ್ಕೆ ಕರೆ ಮಾಡುವ ಮೂಲಕ ನಕಲಿ ಬಂಗಾರದ ವಂಚನೆ ಪ್ರಕರಣಗಳಿಂದ ಸುರಕ್ಷಿತವಾಗಿರಬಹುದು. ನಕಲಿ ಬಂಗಾರದ ವಂಚಕರ ಜಾಲಕ್ಕೆ ಬೀಳದೆ ಸುರಕ್ಷಿತವಾಗಿರಿ ಎಂದು ಪೊಲೀಸ್ ನಾಗರಿಕರಲ್ಲಿ ಮನವಿ ಮಾಡಿದೆ.


**ಉಚಿತ "ಮೂಳೆ ಸಾಂದ್ರತೆ" ತಪಾಸಣಾ ಶಿಬಿರ**

(ನೀವು 35 ವಯಸ್ಸಿನ ಮೇಲ್ಪಟ್ಟವರಾಗಿದ್ದರೆ)

ಈ ಸುವರ್ಣಾವಕಾಶವನ್ನು ಸದುಪಯೋಗಪಡಿಸಿಕೊಳ್ಳಿ

ದಿನಾಂಕ : 13.07.2022ನೇ ಬುಧವಾರ

ಸಮಯ: ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 4 ರವರೆಗೆ

**ಡಾ. ಪ್ರಭು ಬಸವನಗೌಡ,** ಎಂ.ಎಸ್. ಆರ್ಥೋ, ಕೀಲು ಮೂಳೆ ತಜ್ಞರು

ಸ್ಥಳ : ಬಸವೇಶ್ವರ ಹೆಲ್ತ್ ಸೆಂಟರ್, 'ಶಿವ ಸದನ' ನಂ. 310, ಪೆವಿಲಿಯನ್ ರೋಡ್, ಹೆಗಡೆ ಎಕ್ಸ್-ರೇ ಕ್ಲಿನಿಕ್ ಪಕ್ಕ, ದಾವಣಗೆರೆ-577004

ಹೆಸರು ನೋಂದಾಯಿಸಲು ಸಂಪರ್ಕಿಸಿ

08192-237567, 80955 50535

# ಜನಸಂಖ್ಯೆಗೆ ಅನುಗುಣವಾಗಿ ಎಸ್ಸಿ, ಎಸ್ಟಿ ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ಪ್ರತಿಭಟನೆ



ದಾವಣಗೆರೆ, ಜು.11- ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿ, ಪಂಗಡದವರಿಗೆ ಮೀಸಲಾತಿ ಹೆಚ್ಚಿಸುವಂತೆ ಆಗ್ರಹಿಸಿ ನಗರದಲ್ಲಿ ಇಂದು ಎಸ್ಸಿ, ಎಸ್ಟಿ ಸಂಘಟನೆಗಳ ಒಕ್ಕೂಟದ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿವಿಧ ಸಮುದಾಯಗಳ ಮುಖಂಡರು ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ನಂತರ ಅಂಬೇಡ್ಕರ್ ವೃತ್ತದಿಂದ ಸಾಗಿ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿ ಮಾನವ ಸರಪಳಿ ರಚಿಸಿ ರಸ್ತೆ ತಡೆ ನಡೆಸಿದರು.

ಬಳಿಕ ಪ್ರತಿಭಟನಾ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿದ ಎಸ್ಸಿ-ಎಸ್ಟಿ ಸಮುದಾಯದವರು ಜಿಲಾಧಿಕಾರಿ ಮುಖಾಂತರ ಮೀಸಲಾತಿ ಹೆಚ್ಚಳಕ್ಕೆ ಒತ್ತಾಯಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿದರು.

ಬಂಜಾರ ಗುರು ಪೀಠದ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿ ಪ್ರತಿಭಟನೆಗೆ ಚಾಲನೆ ನೀಡಿ, ನ್ಯಾಯಮೂರ್ತಿ ಹೆಚ್.ಎಸ್. ನಾಗಮೋಹನದಾಸ್ ವರದಿ ಜಾರಿ ಮಾಡಬೇಕು ಎಂದು ಒತ್ತಾಯಿಸಿ, ಬೆಂಗಳೂರಿನಲ್ಲಿ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ಇಂದಿಗೆ 152ನೇ ದಿನಕ್ಕೆ ತಲುಪಿದೆ. ಆದರೆ, ರಾಜ್ಯ ಸರ್ಕಾರ ನಮ್ಮ ಬೇಡಿಕೆ ಈಡೇರಿಸಲು ಮೀನಾ ಮೇಷ ಎಣಿಸುತ್ತಿರುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರ ನಮ್ಮನ್ನು ಹೇಗೆ ನಡೆಸಿಕೊಳ್ಳುತ್ತಿದೆ ಎಂಬುದನ್ನು ಪ್ರತಿಯೊಬ್ಬ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಅರ್ಥ ಮಾಡಿಕೊಳ್ಳಬೇಕು. ನಾವು ಭಿಕ್ಷೆ ಕೇಳುತ್ತಿಲ್ಲ, ನಮ್ಮ ಹಕ್ಕು ಕೇಳುತ್ತಿದ್ದೇವೆ. ಸರ್ಕಾರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನಿಗದಿ ಮಾಡದಿದ್ದರೆ, ಹಿಂದುಳಿದ ವರ್ಗಗಳ ಮಠಾಧೀಶರ ಒಕ್ಕೂಟದಿಂದ ಬೀದಿಗೆ ಇಳಿದು ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ನಾಯಕ ಎನ್. ಮೂರ್ತಿ ಮಾತನಾಡಿ, ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ ಹಿಂದೆ ಹೋರಾಟ ನಡೆಸಿದ್ದ ಸಂದರ್ಭದಲ್ಲಿ ಆಗಿನ (5ನೇ ಪುಟಕ್ಕೆ)

# ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಗುರು ಪೂರ್ಣಿಮೆ, ವಿಶೇಷ ಪೂಜೆ




ದಾವಣಗೆರೆ, ಜು. 11- ಶ್ರೀ ಮಾತಾ ಅನ್ನ ಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 13ರ ಬುಧವಾರ ಗುರು ಪೂರ್ಣಿಮೆ ಪ್ರಯುಕ್ತ ನವಗ್ರಹ ಹೋಮ, ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

# ದಾವಿವಿ ಕುಲಸಚಿವರಾಗಿ ಡಾ. ಕೆ. ಶಿವಶಂಕರ್

ದಾವಣಗೆರೆ, ಜು. 11 - ದಾವಣಗೆರೆ ವಿಶ್ವವಿದ್ಯಾನಿಲಯದ ಕುಲ ಸಚಿವ (ಮೌಲ್ಯಮಾಪನ) ಹುದ್ದೆಗೆ ಡಾ.ಕೆ. ಶಿವಶಂಕರ್ ಅವರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಶಿವಶಂಕರ್ ಅವರು ಬೆಳಗಾವಿಯ ಸರ್ ಎಂ. ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾನಿಲಯದ ಎಂಬಿಎ ಸ್ನಾತಕೋತ್ತರ ವಿಭಾಗದ ಸಹ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

# ಭಾರತ ಸೇವಾದಳ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಪ್ರೊ. ಚನ್ನಪ್ಪ ಪಲ್ಲಾಗಟ್ಟೆ



ದಾವಣಗೆರೆ, ಜು. 11- ಭಾರತ ಸೇವಾದಳ ದಾವಣಗೆರೆ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಪ್ರೊ. ಹೆಚ್. ಚನ್ನಪ್ಪ ಪಲ್ಲಾಗಟ್ಟೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಭಾರತ ಸೇವಾದಳದ ಜಿಲ್ಲಾಧ್ಯಕ್ಷರಾಗಿ 40 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ್ದ ಮಾಜಿ ರಾಜ್ಯಸಭಾ ಸದಸ್ಯ ದಿ. ಕೆ.ಆರ್. ಜಯದೇವಪ್ಪ ಅವರ ನಿಧನದಿಂದ ತೆರವಾದ ಸ್ಥಾನಕ್ಕೆ ಇತ್ತೀಚಿಗೆ (5ನೇ ಪುಟಕ್ಕೆ)






# ಸಂಪತ್ತು ಬೆಳೆದಂತೆಲ್ಲ ಮಾನವೀಯ ಸಂಬಂಧಗಳು ಸಡಿಲಗೊಳ್ಳದಿರಲಿ




ಹರಿಹರ, ಜು. 11- ಮನುಷ್ಯ ಜೀವನದಲ್ಲಿ ಬದಲಾವಣೆ ಮತ್ತು ಬೆಳವಣಿಗೆ ಎರಡೂ ಬೇಕು. ಹಣ ಸಂಪಾದಿಸದಿದ್ದರೂ ಚಿಂತೆಯಿಲ್ಲ, ಗುಣವಂತನಾಗಿ ಬಾಳುವುದು ಮುಖ್ಯ. ಸಂಪತ್ತು ಬೆಳೆದಂತೆಲ್ಲ ಮಾನವೀಯ ಸಂಬಂಧಗಳು ಸಡಿಲಗೊಳ್ಳಬಾರದೆಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಇಲ್ಲಿನ ಹಳೇಪೇಟೆ ಶ್ರೀ ಜಗದ್ಗುರು ರೇಣುಕಾಚಾರ್ಯ ಮತ್ತು ಬಸವೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ಜರುಗಿದ ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಹಣ ಮತ್ತು ಅಧಿಕಾರದ ಬಗ್ಗೆ ಚಿಂತಿಸುವ ಜನರು, ದೇಶ ಮತ್ತು ಧರ್ಮದ ಬಗ್ಗೆ ಚಿಂತಿಸುವ ಅವಶ್ಯಕತೆಯಿದೆ. ತನಗಾಗಿ ಬಯಸುವುದು ಜೀವಗುಣ. ಎಲ್ಲರಿಗಾಗಿ ಬಯಸುವುದು ದೇವಗುಣ ಎಂದು ಶ್ರೀಗಳು ಹೇಳಿದ್ದಾರೆ.

ಮನುಷ್ಯ ಧರ್ಮ ಪರಿಪಾಲನೆಯಿಂದ ವಿಮುಖನಾದರೆ ಜೀವನ ಅಶಾಂತಿಯ ಕಡಲಾಗುತ್ತದೆ. ಉಸಿರಾಟಕ್ಕೆ ಗಾಳಿ ಎಷ್ಟು ಮುಖ್ಯವೋ ಅಷ್ಟೇ ಆದರ್ಶ ವ್ಯಕ್ತಿಯಾಗಿ ಬಾಳಲು ಸತ್ಸಂಗ ಅವಶ್ಯಕವಾಗಿದೆ. ಸಾಮಾಜಿಕ ಸಂಪ್ರದಾಯಗಳು ಬದಲಾಗಬಹುದು. ಆದರೆ ನೈತಿಕ ಮೌಲ್ಯಗಳು ಶಾಶ್ವತವಾಗಿರುತ್ತವೆ. ಜೀವನ ಮೌಲ್ಯಗಳನ್ನು ಅರಿತು ಆಚರಿಸಿಕೊಂಡು ಬಂದರೆ ಬದುಕು ಉಜ್ವಲಗೊಳ್ಳುವುದೆಂದು ವೀರಶೈವ ಧರ್ಮ ಸಿದ್ಧಾಂತದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಸ್ಪಷ್ಟಪಡಿಸಿದ್ದಾರೆ ಎಂದರು.

ಗದುಗಿನ ರಾಜಗುರು ಗುರುಸ್ವಾಮಿ ಕಲಕೇರಿ ಅವರು 'ರಂಭಾಪುರಿ ಬೆಳಗು' ಬಿಡುಗಡೆ ಮಾಡಿದರು. (5ನೇ ಪುಟಕ್ಕೆ)




॥ ಶ್ರೀ ಬಸವೇಶ್ವರ ಪ್ರಸನ್ನ ॥ ಶ್ರೀ ಆಂಜನೇಯ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಸಿಟಿ ಆನೆಕೊಂಡ ವಾಸಿ
**ಶ್ರೀ ಎ.ಎಸ್. ಚಂದ್ರಶೇಖರಪ್ಪ ಮತ್ತು ಸಹೋದರರು**
ಮಾಡುವ ವಿಜ್ಞಾಪನೆಗಳು.
ದಿನಾಂಕ 04.07.2022ನೇ ಸೋಮವಾರ ಮಧ್ಯಾಹ್ನ 3.00 ಗಂಟೆಗೆ
ನನ್ನ ತಮ್ಮನವರಾದ
**ಶರಣ ಎಸ್.ಎಂ. ಷಣ್ಮುಖಪ್ಪನವರು**
(ಸಣ್ಣ ಅಣಜಿ ದಿ. ಎ.ಎಸ್. ಮಹದೇವಪ್ಪನವರ ಪುತ್ರ)
ಶಿವಾಧೀನರಾದ ಪ್ರಯುಕ್ತ ಲಿಂಗೈಕ್ಯರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
**ದಿನಾಂಕ 12.7.2022ನೇ ಮಂಗಳವಾರ ಬೆಳಿಗ್ಗೆ 10 ಗಂಟೆಗೆ**
**ಈಶ್ವರ -ಪಾರ್ವತಿ ದೇವಸ್ಥಾನ, ವಿದ್ಯಾನಗರ, ದಾವಣಗೆರೆ**
ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ಮೃತರ ಧರ್ಮಪತ್ನಿ : ಶ್ರೀಮತಿ ಸುವರ್ಣಮ್ಮ, ಮಗ : ಗೌತಮ್
ಶ್ರೀ ಎ.ಎಸ್.ಚಂದ್ರಶೇಖರಪ್ಪ ಮತ್ತು ಸಹೋದರರು,
ಸಹೋದರಿಯರು, ಮಕ್ಕಳು, ಮೊಮ್ಮಕ್ಕಳು,
ಸಣ್ಣ ಅಣಜಿ ವಂಶಸ್ಥರು ಹಾಗೂ ಬಂಧು-ಮಿತ್ರರು.

ವಿ.ಸೂ : ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ.







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte